ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಅಹಮದಾಬಾದ್‌ನಲ್ಲಿ ಗುರುವಾರ ನಡೆದ ಜಿಟಿ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ 19.2 ಓವರ್‌ಗಳಲ್ಲಿ 155 ರನ್‌ಗಳಿಗೆ ಮೊದಲ ಬಾರಿಗೆ ಸರ್ವ ಪತನ ಕಂಡು ಆಲೌಟ್ ಆಯಿತು.




01 ಮೇ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 52 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸಾಧು ಅಕ್ಕ-ಇವರಿಗೆ ಗೊತ್ತಿರಲಿಲ್ಲ ಕಾರ್ಮಿಕ ದಿನದ ಮಹತ್ವ » 2



ದೇಶದ ಅಭಿವೃದ್ಧಿಗೆ ನಮ್ಮ ಸಂವಿಧಾನ ಪೂರಕ » 3



ಸುಗಮ ಸಂಚಾರದ ಕ್ರಮ ಖಾಸಗಿಯವರಿಗೆ ಅನುಕೂಲ » 4

# ಸಿಎಂ ಬದಲಾವಣೆ ಇಲ್ಲ, ಗೊಂದಲಕ್ಕೆ ಶೀಘ್ರ ತೆರೆ

## ನಾನು ಮುಖ್ಯಮಂತ್ರಿ ಆಗಬೇಕೆಂದರೆ ಸೋನಿಯಾ ಗಾಂಧಿ ನಿರ್ಧರಿಸಬೇಕು: ಖರ್ಗೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಬದಲಾವಣೆ ಇಲ್ಲ. ನಾಯಕತ್ವ ಬದಲಾವಣೆಯ ಗೊಂದಲ ಶೀಘ್ರದಲ್ಲಿಯೇ ಬಗೆಹರಿಯಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸ್ಪಷ್ಟಪಡಿಸಿದರು.

ಗುರುವಾರ ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ಮಾಡಬೇಕೆಂದು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರು ನಿರ್ಣಯ ತೆಗೆದುಕೊಂಡರೆ ಸಮಯ ಹಿಡಿಯುತ್ತದೆ. ನಾನು ಮುಖ್ಯಮಂತ್ರಿ ಆದರೆ ಉತ್ತಮ ಎಂದು ಕೆಲವರು ಹೇಳುತ್ತಾರೆ, ನೀವು ಮಾಧ್ಯಮದವರು ಹೇಳುತ್ತೀರಿ, ಮೇಲಿನವರೂ ಹೇಳುತ್ತಾರೆ. ಆದರೆ, ನಮ್ಮ ಹಣೆಬರಹ ಅನ್ನುವುದಕ್ಕಿಂತ ಪಕ್ಷದ ಸಿದ್ಧಾಂತ ಪ್ರಕಾರ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ ಎಂದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಗೊಂದಲಗಳಿರುವುದು ನಿಜ. ಅದು ಶೀಘ್ರವೇ ಬಗೆಹರಿಯಲಿದೆ. ಪ್ರಸ್ತುತ ರಾಜ್ಯದಲ್ಲಿ ಮುಖ್ಯಮಂತ್ರಿ ಇದ್ದಾರೆ, ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಸದ್ಯಕ್ಕೆ ಉದ್ಭವಿಸುವುದಿಲ್ಲ. ಒಂದು ವೇಳೆ ಅಂತಹ ಸಂದರ್ಭ ಬಂದರೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ. ಅದಕ್ಕೆ ಸಮಯ ಹಿಡಿಯುತ್ತದೆ, ಆ ಸಮಯ ಬಂದಾಗ ನೋಡೋಣವೆಂದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಇತ್ತೀಚೆಗೆ ಕಾಂಗ್ರೆಸ್‌ನ 40-50 ಶಾಸಕರು ದೆಹಲಿಗೆ ಟಿಕೆಟ್ ಕಾಯ್ದಿರಿಸಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ಅವರ ಹೇಳಿಕೆಯನ್ನು ತಳ್ಳಿಹಾಕಿದರು.

**ತಕ್ಕ ಪರಿಹಾರ ನೀಡಬೇಕು**

ಬೌರಿಂಗ್ ಆಸ್ಪತ್ರೆಯ ಕಂಪೌಂಡ್ ಕುಸಿತ ಪ್ರಕರಣ ಬಗ್ಗೆ ಪ್ರತಿಕ್ರಿಯಿಸಿ, ಅದು ಹಳೆಯ ಕಾಂಪೌಂಡ್ ಆಗಿತ್ತು. ಎರಡನೆಯದಾಗಿ, ಅದನ್ನು ಸರಿಯಾಗಿ ನಿರ್ಮಿಸಲಾಗಿರಲಿಲ್ಲ. ಕೆಲವೆಡೆ ಮಣ್ಣಿನ ಗೋಡೆಗಳು, ಇನ್ನೂ ಕೆಲವೆಡೆ ಇಟ್ಟಿಗೆಯ ಗೋಡೆಗಳು ಇರುವುದನ್ನು ನಾನು ಗಮನಿಸಿದ್ದೇನೆ. ಕಾಂಪೌಂಡ್‌ನ ಒಂದು ಭಾಗವನ್ನು ದುರಸ್ತಿಪಡಿಸಬೇಕು. ಪಕ್ಕದಲ್ಲಿ ಕೂತು ವ್ಯಾಪಾರ ಮಾಡುತ್ತಿದ್ದವರಿಗೆ ತಕ್ಕ ಪರಿಹಾರ ನೀಡಬೇಕೆಂದರು.

ಮುಂದೆ ಯಾರೂ ಕಾಂಪೌಂಡ್‌ಗೆ ತಾಗಿ ಕೊಂಡು ಕೂತು ವ್ಯಾಪಾರ ಮಾಡಲು ಅವಕಾಶ ನೀಡಬಾರದು. ಇಂದು ಬೆಂಗಳೂರಿನಲ್ಲಿ ನಡೆದಂತಹ ಘಟನೆ ನಾಳೆ ಇನ್ನೊಂದು ಕಡೆ ನಡೆಯಬಹುದು. ಸರ್ಕಾರ ಜಾಗ್ರತೆ ವಹಿಸಿ, ಈ ಗಿಗ್ ಕಾರ್ಮಿಕರು ಅಥವಾ ಸಣ್ಣ ವ್ಯಾಪಾರಿಗಳಿಗೆ ಸಾಧ್ಯವಾದಷ್ಟು ಸಹಾಯ ಮಾಡಬೇಕು ಎಂದರು.

> **ಗರಿಗೆದರಿದ್ದ ಚಟುವಟಿಕೆಗೆ ಬ್ರೇಕ್**
>
> ಪಂಚ ರಾಜ್ಯಗಳ ಚುನಾವಣೆ ಹಾಗು ಕರ್ನಾಟಕದಲ್ಲಿ ಉಪ ಚುನಾವಣೆ ಮುಗಿದು ಫಲಿತಾಂಶಕ್ಕೆ ದಿನಗಣನೆ ಆರಂಭವಾಗಿರುವ ಸಂದರ್ಭದಲ್ಲಿ ಕಾಂಗ್ರೆಸ್‌ನಲ್ಲಿ ಕಳೆದೊಂದು ವಾರದಿಂದ ನಾಯಕತ್ವ ಬದಲಾವಣೆ ಚಟುವಟಿಕೆ ಗರಿಗೆದರಿದ್ದವು. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬಣದ ಸಚಿವರು, ಶಾಸಕರು ಹೇಳಿಕೆಗಳನ್ನು ನೀಡುತ್ತಾ ಹೈಕಮಾಂಡ್ ಏನು ತೀರ್ಮಾನ ಕೈಗೊಳ್ಳುತ್ತದೆ ಎಂದು ಕಾತರದಿಂದ ಕಾಯುತ್ತಿದ್ದಾರೆ. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ಈ ಹೇಳಿಕೆ ತಣ್ಣೀರೆರಚಿದಂತಾಗಿದೆ.

**ಕೇರಳ, ತಮಿಳುನಾಡಿನಲ್ಲಿ ನಾವೇ ಮೇಲುಗೈ**

ತಮಿಳನಾಡು, ಕೇರಳದಲ್ಲಿ ನಮ್ಮ ಮೈತ್ರಿಕೂಟ ಗೆಲ್ಲುತ್ತದೆ. ಅಸ್ಸಾಂನಲ್ಲಿ ನಮಗೆ ಕಡಿಮೆ ಸೀಟು ಬರುತ್ತೆ ಎಂದು ಮತದಾನೋತ್ತರ ಸಮೀಕ್ಷೆಗಳು ಹೇಳಿವೆ. ಆದರೆ, ಅವು ಹೇಳುವುದಕ್ಕಿಂತಲೂ ಹೆಚ್ಚು ಸ್ಥಾನ ಗೆಲ್ಲುತ್ತೇವೆಂದು ವಿಶ್ವಾಸ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮುನ್ನಡೆ ಸಾಧಿಸುತ್ತೆ ಎನ್ನುವ ಮಾಹಿತಿ ಸಿಕ್ಕಿದೆ. ಬಿಜೆಪಿ ಹಾಗು ಎನ್‌ಡಿಎ ಮೈತ್ರಿಕೂಟದವರು ದಬ್ಬಾಳಿಕೆ ಮಾಡಿ, ಹೆದರಿಸಿ ಟಿಎಂಸಿಗೆ ಟಕ್ಕರ್ ಕೊಡುವ ಕೆಲಸ ಮಾಡುತ್ತಿದ್ದಾರೆ. ಪಕ್ಷದ ಬೆಳವಣಿಗೆಯ ಹಿತದೃಷ್ಟಿಯಿಂದ ಇದೇ ಮೊದಲ ಸಲ ಕಾಂಗ್ರೆಸ್ ಪಶ್ಚಿಮ ಬಂಗಾಳದಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿದ್ದು, ಫಲಿತಾಂಶವು ಪಕ್ಷಕ್ಕೆ ಪೂರಕವಾಗಿ ಬರುವ ವಿಶ್ವಾಸವಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಅತಂತ್ರ ವಿಧಾನಸಭೆ ನಿರ್ಮಾಣವಾದರೆ, ಟಿಎಂಸಿಗೆ ಕಾಂಗ್ರೆಸ್ ಬೆಂಬಲ ನೀಡಲಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಲ್ಲಿಕಾರ್ಜುನ ಖರ್ಗೆ, ಇನ್ನೆರಡು ದಿನ ಕಾದರೆ ಫಲಿತಾಂಶದ ಸ್ಪಷ್ಟ ಚಿತ್ರಣ ಸಿಗಲಿದ್ದು, ಅಲ್ಲಿಯವರೆಗೂ ಕಾಯೋಣ. ಬಳಿಕ ಯೋಚಿಸೋಣ ಎಂದರು.

# ಭೀಮ-ಕ್ಯಾಪ್ಟನ್ ಮುಖಾಮುಖಿ: ಆಂತಕ

## ಈ ಹಿಂದೆ ನಡೆದಿದ್ದ ಕಾಳಗದಲ್ಲಿ ದಂತ ಕಳೆದುಕೊಂಡಿದ್ದ ಭೀಮ

• ಪ್ರಜೋದಯ ವರದಿ

**ಬೇಲೂರು :** ಕಾಡಾನೆಗಳಾದ ಭೀಮ, ಕ್ಯಾಪ್ಟನ್ ನಡುವೆ ಈ ಹಿಂದೆ ನಡೆದ ಕಾಳಗದಲ್ಲಿ ಭೀಮ ತನ್ನ ಒಂದು ದಂತವನ್ನು ಮುರಿದು ಕೊಂಡಿದ್ದು, ಇದೀಗ ಮತ್ತೆ ಆ ಕಾಡಾನೆಗಳು ಮುಖಾಮುಖಿಯಾಗುವ ಮೂಲಕ ಆತಂಕ ಸೃಷ್ಟಿಸಿವೆ.



ತಾಲ್ಲೂಕಿನ ಅರೇಹಳ್ಳಿ ಹೋಬಳಿ ವ್ಯಾಪ್ತಿಯ ಶಿರಗುರ ಗ್ರಾಮದ ಸಮೀಪ ಕಳೆದ ನಾಲ್ಕೈದು ದಿನಗಳಿಂದ ಕ್ಯಾಪ್ಟನ್ ಹೆಸರಿನ ಕಾಡಾನೆ ತಂಗಿದ್ದ ಸ್ಥಳಕ್ಕೆ ಭೀಮ ಕಾಡಾನೆ ಆಗಮಿಸಿದೆ. ಈ ಎರಡು ಕಾಡಾನೆಗಳು ಮುಖಾಮುಖಿಯಾದ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕೆಲ ದೂರ ಒಟ್ಟಿಗೆ ನಡೆಯುತ್ತಾ, ಕಾದಾಟಕ್ಕೆ ಸಜ್ಜಾಗಿರುವಂತೆ ಕಾಣಿಸಿಕೊಂಡ ದೃಶ್ಯಗಳು ಸ್ಥಳೀಯರಲ್ಲಿ ಭೀತಿಯನ್ನುಂಟು ಮಾಡಿವೆ.

ಕೆಲ ತಿಂಗಳ ಹಿಂದೆಯಷ್ಟೇ ಬಿಕ್ಕೋಡು ಸಮೀಪ ಭೀಮ ಮತ್ತು ಕ್ಯಾಪ್ಟನ್ ನಡುವೆ ನಡೆದ ಕಾದಾಟದ ವೇಳೆ ಭೀಮನ, ಸಿಟ್ಟಿನಿಂದ ಮರಕ್ಕೆ ಗುದ್ದಿದ್ದರಿಂದ ಒಂದು ದಂತ ಮುರಿದಿತ್ತು. ಮತ್ತೊಮ್ಮೆ ಇಂತಹ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇದೆ ಎಂಬ ಆತಂಕ ಜನರಲ್ಲಿ ಕಾಡುತ್ತಿದೆ.

ಈ ಬಗ್ಗೆ ಮಾಹಿತಿ ಪಡೆದ ಅರಣ್ಯ ಇಲಾಖೆಯ ಇಟಿಎಫ್ (ಎಲಿಫೆಂಟ್ ಟಾಸ್ಕ್ ಫೋರ್ಸ್) ಸಿಬ್ಬಂದಿ ಎರಡು ಕಾಡಾನೆಗಳ ಚಲನವಲನದ ಮೇಲೆ ನಿಗಾ ವಹಿಸಿ, ಅಹಿತಕರ ಘಟನೆ ನಡೆಯದಂತೆ ಕ್ರಮ ಕೈಗೊಂಡಿದ್ದಾರೆ. ಕಾಡಾನೆಗಳ ನಿರಂತರ ಚಲನವಲನದಿಂದ ಅವುಗಳನ್ನು ಕಾಡಿನೊಳಗೆ ಹಿಮ್ಮೆಟ್ಟಿಸುವ ಕಾರ್ಯಾಚರಣೆ ಸವಾಲಿನದ್ದಾಗಿದೆ.

ಕೋಗೋಡು ಗ್ರಾಮ ಹಾಗು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಡಾನೆಗಳ ಸಂಚಾರ ಹೆಚ್ಚಾಗಿದೆ. ಕಾಫಿ ತೋಟಗಳು ಹಾಗು ಗ್ರಾಮಾಂತರ ಪ್ರದೇಶಗಳಲ್ಲಿ ಆನೆಗಳು ಕಾಣಿಸಿಕೊಳ್ಳುತ್ತಿದ್ದು, ಕೆಲವೆಡೆ ತೋಟಗಳಿಗೆ ನುಗ್ಗಿ ಬೆಳೆ ಹಾನಿ ಮಾಡಿರುವ ಮಾಹಿತಿ ಲಭ್ಯವಾಗಿದೆ. ರಸ್ತೆಗಳಲ್ಲೇ ನಿರ್ಭಯವಾಗಿ ಸಂಚರಿಸುತ್ತಿರುವುದು ಗ್ರಾಮಸ್ಥರಲ್ಲಿ ಭಯ ಹೆಚ್ಚಿಸಿದೆ.

### ಉದ್ದ ಕೋರೆ, ದೈತ್ಯಾಕಾರದ ಒಂಟಿಸಲಗ ಪ್ರತ್ಯಕ್ಷ



**ಸಕಲೇಶಪುರ :** ಜಿಲ್ಲೆಯಲ್ಲಿ ಹಿಂದೆಂದೂ ಕಾಣದ ಉದ್ದನೆಯ ದಂತಗಳನ್ನು ಹೊಂದಿರುವ ದೈತ್ಯಾಕಾರದ ಕಾಡಾನೆ ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ತಾಲ್ಲೂಕಿನ ಹೆತ್ತೂರು ಹೋಬಳಿ ವ್ಯಾಪ್ತಿಯ ಹಳ್ಳಿಬೈಲು ಗ್ರಾಮದಲ್ಲಿ ಈ ಕಾಡಾನೆ ಕಾಣಿಸಿಕೊಂಡಿದೆ. ಅಡಿಕೆ


» ನಾಲ್ಕನೇ ಪುಟದಲ್ಲಿ

# ಹಸೆಮಣೆ ಏರಬೇಕಿದ್ದ ಯುವಕ ಅಪಘಾತದಲ್ಲಿ ಸಾವು

## ಪ್ರೀ ವೆಡ್ಡಿಂಗ್ ಫೋಟೋ ಶೂಟ್‌ಗೆ ತೆರಳುತ್ತಿದ್ದ ವೇಳೆ ದುರ್ಘಟನೆ

• ಪ್ರಜೋದಯ ವರದಿ

**ಸಕಲೇಶಪುರ :** ಕೆಲವೇ ದಿನಗಳಲ್ಲಿ ಹಸೆಮಣೆ ಏರಬೇಕಿದ್ದ ಯುವಕ, ಪ್ರೀ ವೆಡ್ಡಿಂಗ್ ಫೋಟೋಶೂಟ್‌ಗೆ ತೆರಳುತ್ತಿದ್ದ ವೇಳೆ ಕಾರು ಅಪಘಾತದಲ್ಲಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮೂಗಲಿ ಗ್ರಾಮದ ಬಳಿ ಗುರುವಾರ ಬೆಳಗಿನ ಜಾವ ನಡೆದಿದೆ.



ಬೇಲೂರು ತಾಲ್ಲೂಕಿನ ಲಕ್ಕುಂದ ಗ್ರಾಮದ ದರ್ಬಾರ್ ಪೇಟೆ ನಿವಾಸಿ ಎಲ್.ಎನ್.ಮನು (25) ಮೃತಪಟ್ಟ ದುರ್ದೈವಿ. ಯಶೋಧಮ್ಮ-ರಾಜೇಗೌಡ ಎಂಬುವವರ ಪುತ್ರ ಮನು (ಗಿರೀಶ್) ಹಾಗು ಆಲೂರು ತಾಲ್ಲೂಕು ತೊಗರನಹಳ್ಳಿಯ ಲಕ್ಷ್ಮಿ-ವೆಂಕಟೇಶ್ ದಂಪತಿ ಪುತ್ರಿ ಕಾಂಚನಾ ಅವರೊಂದಿಗೆ ಮದುವೆ ನಿಶ್ಚಯ ಆಗಿತ್ತು. ಮೇ 10 ರಂದು ಆಲೂರಿನ ಬೈರಾಪುರ ರಸ್ತೆಯ ಶ್ರೀ ವೀರಶೈವ ಕಲ್ಯಾಣ ಮಂಟಪದಲ್ಲಿ ಮದುವೆ ನಡೆಯಬೇಕಿತ್ತು.



ಮನು ತನ್ನ ಮದುವೆಯ ಸವಿನೆನಪಿಗಾಗಿ ಪ್ರೀ ವೆಡ್ಡಿಂಗ್ ಶೂಟ್ ಮಾಡಿಸಿಕೊಳ್ಳಬೇಕೆಂಬ ಹಂಬಲದಿಂದ ಗುರುವಾರ ಬೆಳಗಿನ ಜಾವ ಸುಮಾರು 4 ಗಂಟೆಗೆ ವಧುವನ್ನು ಕರೆತರಲು ಕಾರಿನಲ್ಲಿ ಹೊರಟಿದ್ದರು. ಸಕಲೇಶಪುರ ತಾಲ್ಲೂಕಿನ ಮೂಗಲಿ ಎಂಬಲ್ಲಿ ಮನು ಚಲಾಯಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ವೇಗವಾಗಿ ಅಪ್ಪಳಿಸಿದೆ. ಅಪಘಾತದ ತೀವ್ರತೆಗೆ, ಕಾರಿನ ಬಲಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಅದರೊಳಗಿದ್ದ ಮದುವೆ ಆಹ್ವಾನ ಪತ್ರಿಕೆಗಳು ಚೆಲ್ಲಾಪಿಲ್ಲಿಯಾಗಿ ಹೊರಬಿದ್ದಿವೆ. ಗಂಭೀರವಾಗಿ ಗಾಯಗೊಂಡ ಮನು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಮದುವೆಯ ಸಂಭ್ರಮದಲ್ಲಿ ಕಂಗೊಳಿಸುತ್ತಿದ್ದ ಮನೆ ಒಂದೇ ಕ್ಷಣದಲ್ಲಿ ಶೋಕ ಸಾಗರದಲ್ಲಿ ಮುಳುಗಿದೆ. ಮಗನನ್ನು ಕಳೆದುಕೊಂಡ ತಂದೆ-ತಾಯಿಯ ಆಕ್ರಂಧನ ಮುಗಿಲು ಮುಟ್ಟಿದ್ದು, ಇಡೀ ಲಕ್ಕುಂದ ಗ್ರಾಮದ ದರ್ಬಾರ್ ಪೇಟೆಯನ್ನು ಮೌನದಲ್ಲಿ ಮುಳುಗಿಸಿದೆ. ಇತ್ತ ತನ್ನ ಬಾಳ ಸಂಗಾತಿಯಾಗ ಬೇಕಿದ್ದವನನ್ನು ಕಳೆದುಕೊಂಡ ವಧು ಕಣ್ಣೀರಿಡುತ್ತಿದ್ದಾಳೆ. ಮದುವೆಯ ಆಮಂತ್ರಣ ಪತ್ರಿಕೆ ಹಂಚಿ, ಎಲ್ಲರನ್ನೂ ಬರಮಾಡಿಕೊಂಡು ವಿವಾಹ ಎಲ್ಲರ ಸಮ್ಮುಖದಲ್ಲಿ ನವ ವಧು- ವರರಿಗೆ ಅಕ್ಷತೆ ಹಾಕಬೇಕಿದ್ದ ಹೆತ್ತವರ ಕೈಗಳು ಮಗನ ಚಿತೆಗೆ ಅಗ್ನಿಸ್ಪರ್ಶ ಮಾಡುವಂತಾಗಿದ್ದು ಮಾತ್ರ ದುರಂತ.

### ಕಾರು ಅಪಘಾತ: ಗಾಯಾಳು ಸಾವು

**ಹಾಸನ:** ಚನ್ನರಾಯಪಟ್ಟಣ ತಾಲ್ಲೂಕು ಮಲ್ಲನಘಟ್ಟ ಹೇಮಾವತಿ ನಾಲೆಗೆ ಸ್ವಿಫ್ಟ್ ಕಾರು ಬಿದ್ದು ಗಾಯಗೊಂಡಿದ್ದವರ ಪೈಕಿ ಒಬ್ಬರು ಮೃತಪಟ್ಟಿದ್ದು, ಸಾವಿನ ಸಂಖ್ಯೆ ಮೂರಕ್ಕೆ ಏರಿದಂತಾಗಿದೆ. ಅಡುಗೆ ಭಟ್ಟರಾಗಿದ್ದ ಶಿಡ್ಲಘಟ್ಟ ಮೂಲದ ಚರಣ್ (35) ಮೃತ.

ಧರ್ಮಸ್ಥಳ ಪ್ರವಾಸ ಮುಗಿಸಿ ಬುಧವಾರ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಚನ್ನರಾಯಪಟ್ಟಣ ತಾಲ್ಲೂಕು ಮಲ್ಲನಘಟ್ಟ ಬಳಿ ನೀರಿಲ್ಲದ ನಾಲೆಗೆ ಶಿಫ್ಟ್ ಕಾರು ಉರುಳಿತ್ತು. ದುರಂತದಲ್ಲಿ ಗಂಭೀರ ಗಾಯ ಗೊಂಡ ಪ್ರಿಯಾಂಕ (30) ಹಾಗು ಇವರ ಒಂದೂವರೆ ವರ್ಷದ ಮಗ ವೈಭವ್ ಸ್ಥಳದಲ್ಲೇ ಮೃತಪಟ್ಟಿದ್ದರು. ಉಳಿದವರನ್ನು ತಾಲ್ಲೂಕು ಹಾಗು ಹಾಸನ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ತೀವ್ರವಾಗಿ ಗಾಯಗೊಂಡಿದ್ದ ಚರಣ್ ಚಿಕಿತ್ಸೆ ಫಲಕಾರಿಯಾಗದೇ ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

### ಮಳೆಗೆ ಸಿಲುಕಿ ವೃದ್ಧ ಮೃತ



**ಬೇಲೂರು:** ಮಳೆಗೆ ಸಿಲುಕಿ ವೃದ್ಧ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಚೀಲನಾಯಕನಹಳ್ಳಿ ಗೇಟ್ ಬಳಿ ನಡೆದಿದೆ. ಬಸವರಾಜು (62) ಮೃತ.

ಸಂಜೆ ಮನೆಗೆ ಮರಳುತ್ತಿದ್ದ ವೇಳೆ ಮಳೆ ಹೆಚ್ಚಾಗಿದ್ದ ಕಾರಣ ನಿಯಂತ್ರಣ ತಪ್ಪಿ ಬಿದ್ದಿದ್ದಾರೆ. ಮೇಲೇಳು ಆಗದೆ ನೀರಿನ ಹರಿವು ಹೆಚ್ಚಿದ್ದರಿಂದ ಮೇಲೇಳಲು ಸಾಧ್ಯವಾಗದೆ ಮೃತಪಟ್ಟಿದ್ದಾರೆ ಎಂದು ಹೇಳಲಾಗಿದೆ. ಈ ಬಗ್ಗೆ ಸ್ಥಳಕ್ಕೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಅನುದಾನ ನೀಡಿ

## ಸರ್ಕಾರಕ್ಕೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಬೇಸಿಗೆ ತೀವ್ರವಾಗುತ್ತಿರುವ ಹಿನ್ನಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸರ್ಕಾರ ಅನುದಾನ ಬಿಡುಗಡೆ ಮಾಡುವ ಮೂಲಕ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಒತ್ತಾಯಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಉಷ್ಣಾಂಶ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇರುವುದರಿಂದ ನೀರಿನ ಕೊರತೆ ಗಂಭೀರವಾಗಬಹುದು. ಆದ್ದರಿಂದ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ 15 ಲ.ರೂ. ಅನುದಾನ ಬಿಡುಗಡೆ ಮಾಡಬೇಕು. ಜೊತೆಗೆ, ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯಡಿ ನಿರ್ಮಿಸಿರುವ ನೀರಿನ ಟ್ಯಾಂಕ್‌ಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಕನಿಷ್ಠ 5ರಿಂದ 6 ಕೋಟಿ ಅನುದಾನ ನೀಡುವ ಮೂಲಕ ನೀರಿನ ಪೂರೈಕೆ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಹೇಳಿದರು.



> **ಸಿಎಂ ಬದಲಾಣೆಗೂ ನಮಗೂ ಸಂಬಂಧವಿಲ್ಲ**
>
> ಮುಖ್ಯಮಂತ್ರಿ ಬದಲಾವಣೆ ವಿಚಾರಕ್ಕೆ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಏನಾದರೂ ಮಾಡಿಕೊಳ್ಳಲಿ, ಅದಕ್ಕೂ ನಮಗೆ ಸಂಬಂಧವಿಲ್ಲ. ಈಗ ಜನರ ಸಮಸ್ಯೆಗಳು ಮುಖ್ಯ. ಕುಡಿಯುವ ನೀರು ಒದಗಿಸುವುದು ಸರ್ಕಾರದ ಪ್ರಾಥಮಿಕ ಕರ್ತವ್ಯ. ರಾಜಕೀಯ ವಿಷಯಗಳನ್ನು 2028ರಲ್ಲಿ ನೋಡಿಕೊಳ್ಳೋಣ. ಈಗ ಮೊದಲ ಆದ್ಯತೆ ಜನರನ್ನು ಉಳಿಸುವುದಾಗಿರಬೇಕೆಂದು ಹೆಚ್.ಡಿ.ರೇವಣ್ಣ ಅವರು ಹೇಳಿದರು.

**ಹೆಚ್ಚುವರಿ ಪರಿಹಾರಕ್ಕೆ ಆಗ್ರಹ**

ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ತಡೆಗೋಡೆ ಕುಸಿದು ಏಳು ಮಂದಿ ಮೃತಪಟ್ಟ ಘಟನೆ ಕುರಿತು ವಿಷಾದ ವ್ಯಕ್ತಪಡಿಸಿದ ಅವರು, ಆ ದೃಶ್ಯ ನೋಡಿದರೆ ಹೊಟ್ಟೆ ಉರಿಯುತ್ತದೆ. ಮೃತಪಟ್ಟವರು ದಿನನಿತ್ಯ ದುಡಿದು ಜೀವನ ಸಾಗಿಸುತ್ತಿದ್ದ ಬಡ ಕುಟುಂಬಗಳಿಗೆ ಸೇರಿದವರು. ಮೃತರ ಕುಟುಂಬಗಳಿಗೆ ನೀಡಿರುವ ಪರಿಹಾರ ಅಲ್ಪವಾಗಿದೆ. ರಾಜ್ಯ ಸರ್ಕಾರ ಕನಿಷ್ಠ 10 ಲ.ರೂ. ಹಾಗು ಕೇಂದ್ರ ಸರ್ಕಾರ 5 ಲ.ರೂ. ಪರಿಹಾರ ನೀಡಬೇಕು. ಪ್ರಧಾನ ಮಂತ್ರಿಗಳಿಂದಲೂ ಸಹಾಯ ದೊರೆತರೆ ಕುಟುಂಬಗಳಿಗೆ ನೆರವಾಗುತ್ತದೆ ಎಂದು ಹೇಳಿದರು.

**ಶಿಕ್ಷಕರ ಭರ್ತಿಗೆ ಆಗ್ರಹ**

ಸರ್ಕಾರ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕೆಂದು ಶಿಕ್ಷಣ ಸಚಿವರನ್ನು ಒತ್ತಾಯಿಸಿದ ಅವರು, ಹಳ್ಳಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕುವಂತೆ ಕ್ರಮ ಕೈಗೊಳ್ಳಬೇಕು. ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ ನಿಲ್ಲಿಸಬೇಕೆಂದು ಹೇಳಿದರು.

# ವಾರದೊಳಗೆ ಎತ್ತಿನಹೊಳೆ ಯೋಜನೆ ಕೆಲಸ ಪ್ರಾರಂಭ : ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ

**ಬೆಂಗಳೂರು:** ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯ ಕೆಲಸ ಒಂದು ವಾರದೊಳಗೆ ಪ್ರಾರಂಭವಾಗಲಿದೆ ಎಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎತ್ತಿನಹೊಳೆ ಯೋಜನೆ ಕುರಿತು ನಾನು ಸಭೆ ನಡೆಸಿದ್ದೇನೆ. ಎಲ್ಲಾ ಅಡೆತಡೆಗಳನ್ನು ನಿವಾರಣೆಯಾಗಿದೆ ಎಂದು ನಾನು ಭಾವಿಸುತ್ತೇನೆ. ಅರಣ್ಯ ಇಲಾಖೆ ಆಕ್ಷೇಪ ವ್ಯಕ್ತಪಡಿಸಿತ್ತು. ಆದ್ದರಿಂದ, ನಾವು ಅವರಿಗೆ ಅನುಮತಿಗಾಗಿ ಪರ್ಯಾಯ ಭೂಮಿಯನ್ನು ನೀಡುತ್ತೇವೆ. ಸರ್ಕಾರಕ್ಕೆ 257 ಕೋ. ರೂ.ಗಳನ್ನು ನೀಡುವಂತೆ ನೋಟಿಸ್ ನೀಡಿದ್ದಾರೆ. ಈ ಹಣವನ್ನು ಇಂದೇ ಭರ್ತಿ ಮಾಡುವಂತೆ ನಾನು ನನ್ನ ಇಲಾಖೆಯನ್ನು ಸೂಚಿಸಿದ್ದೇನೆ. 1 ವಾರದೊಳಗೆ ಕೆಲಸ ಪ್ರಾರಂಭಿಸುತ್ತೇವೆಂದು ಹೇಳಿದರು.



ಬೆಂಗಳೂರು ಮತ್ತು ಇತರೆ ಪ್ರದೇಶಗಳಲ್ಲಿ ಮಳೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು ಜಿಬಿಎ ಅಧಿಕಾರಿಗಳ ಜೊತೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಭೆ ನಡೆಸಿದರು. ಜಿಬಿಎ ಅಧ್ಯಕ್ಷ ಮಹೇಶ್ವರ ರಾವ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಸಕಿ ರಿಜ್ವಾನ್ ಅರ್ಷದ್ ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಪ್ರೇಯಸಿ ಮೇಲೆ ಅತ್ಯಾಚಾರ, ಕೊಲೆ: ಅಪರಾಧಿಗೆ ಜೀವಾವಧಿ ಶಿಕ್ಷೆ

## ಸಾಕ್ಷಿನಾಶ ಮಾಡಿದವನಿಗೂ 2 ವರ್ಷ ಸಜೆ: ಜಿಲ್ಲಾ ನ್ಯಾಯಾಲಯ ತೀರ್ಪು

• ಪ್ರಜೋದಯ ವರದಿ

**ಹಾಸನ:** ಯುವತಿಯನ್ನು ಪ್ರೀತಿಸುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ ಬಳಿಕ ಕೊಲೆ ಮಾಡಿರುವ ಪ್ರಿಯಕರನಿಗೆ ಕೋರ್ಟ್ ಜೀವಾವಧಿ ಶಿಕ್ಷೆ ಹಾಗು ಸಾಕ್ಷಿನಾಶ ಆರೋಪದಲ್ಲಿ ಎ2 ಅಪರಾಧಿಗೆ ಎರಡು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಧಿಸಿ ನಗರದ 3ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ತಾಲ್ಲೂಕಿನ ಕಲ್ಕೆರೆ ಗ್ರಾಮದ ಬಳಿ ಹಾಡ್ಲಗೆರೆಪುರದ ಪ್ರವೀಣ್(29), ತಮ್ಮಣ್ಣಿ(62) ಶಿಕ್ಷೆಗೆ ಗುರಿಯಾಗಿದ್ದಾರೆ. 2018 ಏಪ್ರಿಲ್ 22 ರಂದು ಹುಟ್ಟು ಹಬ್ಬ ಆಚರಣೆ ಮಾಡಲು ಬಂದ ಪ್ರೇಯಸಿ ಮೇಲೆ ಅತ್ಯಾಚಾರ ಎಸಗಿ ಬಳಿಕ ಆಕೆಯನ್ನು ಪ್ರವೀಣ್ ಉಸಿರುಗಟ್ಟಿಸಿ ಕೊಲೆ ಮಾಡಿದ್ದ. ಈ ಸಂಬಂಧ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯ, ಎ1 ಆರೋಪಿಗೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302 (ಕೊಲೆ), 376 (ಅತ್ಯಾಚಾರ) ಮತ್ತು 201 (ಸಾಕ್ಷ್ಯನಾಶ) ಜೊತೆಗೆ ಸೆಕ್ಷನ್ 34ರ ಅಡಿಯಲ್ಲಿ ಅಪರಾಧಿ ಎಂದು ತೀರ್ಪು ನೀಡಿದ್ದರೆ, ಎ2 ಆರೋಪಿಗೆ ಭಾರತೀಯ ದಂಡ ಸಂಹಿತೆ ಸೆಕ್ಷನ್ 201 (ಸಾಕ್ಷ್ಯ ನಾಶ) ಜೊತೆಗೆ ಸೆಕ್ಷನ್ 34ರ ಅಡಿಯಲ್ಲಿ ಅಪರಾಧಿ ಎಂದು ತೀರ್ಪು ಪ್ರಕಟಿಸಿದೆ.

ಅಪರಾಧಿ ಪ್ರವೀಣ್‌ಗೆ ಕೊಲೆ ಕೇಸಿನಲ್ಲಿ ಜೀವಾವಧಿ ಸೆರೆವಾಸ ಮತ್ತು 20 ಸಾವಿರ ರೂ. ದಂಡ ವಿಧಿಸಿದ್ದು, ದಂಡ ಪಾವತಿಸಲು ವಿಫಲವಾದರೆ 1 ವರ್ಷ ಸಾದಾ ಸೆರೆವಾಸ ಅನುಭವಿಸಬೇಕು. ಅತ್ಯಾಚಾರ ಪ್ರಕರಣದಲ್ಲಿ 10 ವರ್ಷಗಳ ಕಠಿಣ ಸೆರೆವಾಸ ಮತ್ತು 10 ಸಾವಿರ ರೂ. ದಂಡ. ದಂಡ ಕಟ್ಟದಿದ್ದರೆ 6 ತಿಂಗಳು ಸಾದಾ ಸೆರೆವಾಸ ಅನುಭವಿಸಬೇಕು ಹಾಗೆಯೇ ಸಾಕ್ಷ್ಯನಾಶ ಆರೋಪದಡಿ 3 ವರ್ಷಗಳ ಕಠಿಣ ಸೆರೆವಾಸ ಮತ್ತು 5,000 ರೂ. ದಂಡ. ದಂಡ ಪಾವತಿಸ ದಿದ್ದರೆ 3 ತಿಂಗಳು ಸಾದಾ ಸೆರೆವಾಸ ಅನುಭವಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ.



ತಮ್ಮಣ್ಣಿಗೆ ಸಾಕ್ಷ್ಯನಾಶ ಆರೋಪದಡಿ 2 ವರ್ಷಗಳ ಕಠಿಣ ಸೆರೆವಾಸ

» ನಾಲ್ಕನೇ ಪುಟದಲ್ಲಿ

# ಇಂದು ಬುದ್ಧ ಜಯಂತಿ

• ಪ್ರಜೋದಯ ವರದಿ

**ಹಾಸನ :** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮೇ 1 ರಂದು ಬೆಳಿಗ್ಗೆ 11 ಗಂಟೆಗೆ ಭಗವಾನ್ ಬುದ್ಧ ಜಯಂತಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಶಾಸಕ ಕೆ.ಎಂ ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕ ಹೆಚ್.ಪಿ.ಸ್ವರೂಪ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಸ'ಂಸ'ದ' ಶ್ರೇಯಸ್ ಎಂ. ಪಟೇಲ್, ಮಾಜಿ ಸಚಿವ ಹೆಚ್.ಡಿ ರೇವಣ್ಣ, ಶಾಸಕರಾದ ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಣ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಧಮ್ಮಚಾರಿ ಬೌದ್ಧ ಮಹಾಸಭಾದ ಎನ್.ಬಿ. ವೀರಭದ್ರಯ್ಯ ಅವರು ಉಪನ್ಯಾಸ ನೀಡಲಿದ್ದಾರೆ.

## ಅನಿಷ್ಟಾಚಾರಣೆಯ ನಿಷೇಧದ ಕುರಿತ ಅರಿವು ಕಾರ್ಯಕ್ರಮದಲ್ಲಿ ನ್ಯಾ||ಜಿ.ಕೆ.ದಾಕ್ಷಾಯಿಣಿ ಸಲಹೆ

# ಮೌಢ್ಯಾಚರಣೆಯನ್ನು ಕಿತ್ತೊಗೆಯಲು ಶಿಕ್ಷಣದಿಂದ ಮಾತ್ರ ಸಾಧ್ಯ

• ಪ್ರಜೋದಯ ವರದಿ

**ಹಾಸನ :** ಪುರಾತನ ಕಾಲದಿಂದ ದೇವರ ಹೆಸರಿನಲ್ಲಿ ನಡೆದುಕೊಂಡು ಬಂದ ಅನಿಷ್ಟ ಆಚರಣೆಯಿಂದ ಹೆಣ್ಣು ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ ಕುಗ್ಗುತ್ತಿದ್ದು, ಆತ್ಮಸ್ಥೈರ್ಯ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ.ಕೆ.ದಾಕ್ಷಾಯಿಣಿ ಅವರು ಹೇಳಿದರು.

ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯ ಚೀಲನಹಳ್ಳಿ ಗೊಲ್ಲರ ಹಟ್ಟಿಯಲ್ಲಿ ಏರ್ಪಡಿಸಲಾಗಿದ್ದ ಮುಟ್ಟಿನ ಸಮಯದಲ್ಲಿ ಮತ್ತು ಹೆರಿಗೆಯ ನಂತರ ಹೆಣ್ಣು ಮಕ್ಕಳನ್ನು ಊರಿನಿಂದ ಹೊರಗಿಡುವ ಅನಿಷ್ಟಾಚಾರಣೆಯ ನಿಷೇಧದ ಕುರಿತ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಿದ್ದಲ್ಲಿ ಸಮಾಜದಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಇದರಿಂದ ಪುರಾತನ ಕಂದಾಚಾರಗಳು, ಮೂಢನಂಬಿಕೆಗಳನ್ನು ತೊಡೆದು ಹಾಕಬಹುದಾಗಿದೆ. ಶಿಕ್ಷಣದಿಂದ ಮೌಢ್ಯಾಚರಣೆಯನ್ನು ಬೇರು ಸಮೇತ ಕಿತ್ತೊಗೆಯಲು ಶಿಕ್ಷಣದಿಂದ ಮಾತ್ರ ಸಾಧ್ಯ. ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೆ ಹೆಣ್ಣು ಮಕ್ಕಳ ಒಳಿತಿಗಾಗಿ, ಸಮಾನತೆಗಾಗಿ, ಹಕ್ಕುಗಳಿಗಾಗಿ ಶಿಕ್ಷಣದ ಮೂಲಕ ಅವರನ್ನು ಗಟ್ಟಿಗೊಳಿಸಬೇಕೆಂದು ಸಲಹೆ ನೀಡಿದರು.





ಹಿಂದಿನ ಕಾಲದಿಂದಲೂ ಜಾರಿಯಲ್ಲಿದ್ದ ಮೂಢನಂಬಿಕೆಗಳಿಗೆ ಬೇಸತ್ತು ಪತ್ರವನ್ನು ಮಹಿಳೆಯರು ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಬರೆದು ಮೌಢ್ಯಾಚರಣೆಯನ್ನು ನಿಷೇಧಿಸುವಂತೆ ಮತ್ತು ಈ ಬಗ್ಗೆ ಜಾಗೃತಿ ಮೂಡಿಸಿ ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸುವಂತೆ ಕೋರಿದ್ದು, ಗ್ರಾಮದ ಹೆಣ್ಣು ಮಕ್ಕಳ ಆರೋಗ್ಯ, ರಕ್ಷಣೆ ಹಾಗೂ ಭವಿಷ್ಯದ ದೃಷ್ಟಿಯಿಂದ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದಾರೆಂದು ಶ್ಲಾಘಿಸಿದರು.

ಪ್ರಕೃತಿ ಸಹಜವಾಗಿ ದೈವದತ್ತವಾಗಿ ಹೆಣ್ಣು ಮಕ್ಕಳು ತಾಯಿಯಾಗುವ ಅವಕಾಶವನ್ನು ಹೊಂದಿದ್ದಾರೆ. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ಅಸಮಾನತೆಯಿಂದ ಕಾಣಲಾಗುತ್ತಿದೆ. ದೇವರ ಹೆಸರಿನಲ್ಲಿ ಆಚರಣೆಗಳ ನೆಪದಲ್ಲಿ ಶೋಷಣೆ ಮಾಡಲಾಗುತ್ತಿದೆ, ಇದು ಸಂಪೂರ್ಣವಾಗಿ ನಿಂತು ಹೋಗಬೇಕು, ಬದಲಾಗುತ್ತಿರುವ ಜಗತ್ತಿನ ಸನ್ನಿವೇಶಗಳಿಗೆ ಅನುಗುಣವಾಗಿ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆದುಕೊಳ್ಳಬೇಕು. ಹೆಣ್ಣು ಮಕ್ಕಳ ಒಳಿತಿಗಾಗಿ ಮೌಢ್ಯಾಚರಣೆಯನ್ನು ಕೈಬಿಟ್ಟು ಸಂಪೂರ್ಣವಾಗಿ ಬದಲಾಗಬೇಕು. ಈ ನಿಟ್ಟಿನಲ್ಲಿ ಸಮುದಾಯದ ಎಲ್ಲಾ ಜನರು ದೃಢ ಸಂಕಲ್ಪ ಮಾಡಬೇಕೆಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳ ಅವರು ಮಾತನಾಡಿ, ಅತಿ ಹೆಚ್ಚು ಗರ್ಭಕೊರಳಿನ ಕ್ಯಾನ್ಸರ್ ಕಂಡು ಬರುತ್ತಿರುವುದು ಗೊಲ್ಲ ಸಮುದಾಯದ ಹೆಣ್ಣು ಮಕ್ಕಳು

» ನಾಲ್ಕನೇ ಪುಟದಲ್ಲಿ

# ಇಂದು 140ನೇ ಹುಣ್ಣಿಮೆ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ :** ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ವತಿಯಿಂದ ಶುಕ್ರವಾರ ಸಂಜೆ 5.30ಕ್ಕೆ ಅರಸೀಕೆರೆ ತಾಲ್ಲೂಕಿನ ಬಾಗೇಶಪುರದ ಶ್ರೀ ಮೈಸೂರಮ್ಮನ ದೇವಸ್ಥಾನದ ಆವರಣದಲ್ಲಿ ಗುರು ತೋರಿದ ದಾರಿ ತಿಂಗಳ ಮಾಮನ ತೇರು 140ನೇ ಹುಣ್ಣಿಮೆ ಕಾರ್ಯಕ್ರಮ ಜರುಗಲಿದೆ. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

# ಹಲವು ಜಿಲ್ಲೆಗಳಲ್ಲಿ ಮಳೆಯ ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಹಲವೆಡೆ ಮುಂದಿನ ಒಂದು ವಾರ ಮಳೆಯಾಗುವ ಸಾಧ್ಯತೆಯ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಶುಕ್ರವಾರ ಐದು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹಾಗೂ ಹದಿನೈದು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗೆ ಆರೆಂಜ್ ಅಲರ್ಟ್ ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಬಿರುಗಾಳಿ ಯೊಂದಿಗೆ ಭಾರೀ ಮಳೆಯಾಗುವ ಸಂಭವವಿದೆ. ಆಲಿಕಲ್ಲು ಬೀಳುವ ಸಾಧ್ಯತೆ ಇದೆ.ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ದಾವಣಗೆರೆ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಮಂಡ್ಯ, ಬೆಂಗಳೂರು ದಕ್ಷಿಣ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.



# ಸಾಧು ಅಕ್ಕ-ಇವರಿಗೆ ಗೊತ್ತಿರಲಿಲ್ಲ ಕಾರ್ಮಿಕ ದಿನದ ಮಹತ್ವ!

ಕಾರ್ಮಿಕರ ದಿನ ಬಂದಾಗ (ಮೇ 1), ಶ್ರಮಿಕ ವರ್ಗದವರಲ್ಲಿ ಅದೇನೋ ಹುರುಪು, ಕಾರ್ಮಿಕರಲ್ಲಿ ಅದೇನೋ ಒಂದು ಉತ್ಸಾಹ. ತಮ್ಮ ಶ್ರಮಕ್ಕೆ ಗೌರವವನ್ನು ಸೂಚಿಸಲೆಂದೇ ಕಾರ್ಮಿಕ ದಿನವನ್ನು ಎಲ್ಲರೂ ಹಮ್ಮಿಕೊಂಡಿದ್ದಾರೆ, ಸಮುದಾಯವು ನಮಗೆ ನೀಡುವ ಗೌರವ ಇದು ಎಂದೇ ತಿಳಿದು, ಅದೊಂದು ದಿನವನ್ನು ಸಂತಸದಿಂದ, ಕ್ರಿಯಾತ್ಮಕವಾಗಿ ಕಳೆಯುತ್ತಾರೆ. ಶ್ರಮದ ದುಡಿಮೆಗೆ ಮಹತ್ವ ನೀಡುವ, ಪ್ರಗತಿಪರ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ದೇಶಗಳಲ್ಲಂತೂ ಕಾರ್ಮಿಕರ ದಿನವನ್ನು ಹಬ್ಬದಂತೆ ಆಚರಿಸುತ್ತಾರೆ. ಆದರೆ, ಕಾರ್ಮಿಕ ದಿನದ ಮಹತ್ವ, ಆಚರಣೆ ಗೊತ್ತಿಲ್ಲದ ಲಕ್ಷಾಂತರ ಜನ ಶ್ರಮಜೀವಿಗಳು ನಮ್ಮ ನಡುವೆ ಇದ್ದಾರೆ; ಅಂತಹ ಶ್ರಮಜೀವಿಗಳು ಕಟ್ಟಿದ ಸಮಾಜದ ಭದ್ರ ತಳಹದಿಯ ಮೇಲೆ ನಾವೆಲ್ಲಾ ನಮ್ಮ ಬದುಕನ್ನು ಇಂದು ಕಟ್ಟಿಕೊಂಡಿದ್ದೇವೆ. ಅಂತಹ ಒಬ್ಬರು ಅನಾಮಿಕ ಎನ್ನಬಹುದಾದ ಶ್ರಮಜೀವಿಯ ನೆನಪಿನಲಿ ಮೂಡಿ ಬಂದ ಈ ಬರಹವು, ನಮ್ಮ ನಾಡಿನ ಎಲ್ಲಾ ಕಾರ್ಮಿಕರಿಗೆ ಸಮರ್ಪಣೆ.

ಏನೋ ಮಗಾ... ಆ ದೇವ್ರ್ ಸಾವಲ್‌ವರೆಗೆ ಕೈ ಕಾಲ್ ಕಟ್ಟಿ ಇದ್, ಗೇಯ್ಕಾ ತಿಂಬಾಂಗ್ ಇಟ್ರ್, ಸಾಕ್ ಹೀಗೊಂದು ಮಾತನ್ನು ಯಾವಾಗಲೂ ಆಡುತ್ತಿದ್ದಳು ನಮ್ಮೂರ ಸಾಧು ಅಕ್ಕ. ಇನ್ನೂ ಎಷ್ಟ್ ಕೆಲಸ ಮಾಡ್ತೀ ಸಾಧು ಅಕ್ಕ. ಸಾಕು ಬಾ ಕುತ್ಕೋ ಎಂದ ನಮ್ಮ ಬಾಯಿಯನ್ನೇ ಆಕೆ ಹಾಗೆ ಮುಚ್ಚಿಸುತ್ತಿದ್ದಳು. ಆದರೆ ವಿಪರ್ಯಾಸ : ಆ ವಿಧಿ ಸಾಧಕ್ಕನಿಗೆ ಅಂಥದ್ದೊಂದು ಅವಕಾಶವನ್ನೇ ನೀಡಲಿಲ್ಲ.

ವಿಧಿಯ ಲೆಕ್ಕಾಚಾರವೇ ಬೇರೆ ಇತ್ತೆನಿಸುತ್ತದೆ. ಬದುಕಿನ ಕೊನೆಯ ದಿನಗಳಲ್ಲಿ ಸಾಧಕ್ಕ ಹಾಸಿಗೆ ಹಿಡಿಯುವಂತೆ ಮಾಡಿ, ತನ್ನ ಆಶಯದಲ್ಲಿ ಆಕೆ ಸೋಲೊಪ್ಪಿಕೊಳ್ಳುವಂತೆ ಮಾಡಿತ್ತು. ಮೊನ್ನೆ ಮೊನ್ನೆ ಹೋಗಿ ನೋಡಿದ್ದಾಗ ಸಾಧಕ್ಕನ ಎಂದಿನ ನಗು ಮಾಸಿತ್ತು, ದೇಹ ಬಳಲಿತ್ತು, ಕೈಗಳು ಸೋತಿದ್ದವು, ನೋಟದಲ್ಲಿ ಅಸಹಾಯಕತೆ ಮಡುಗಟ್ಟಿತ್ತು.




ಆಕೆ ಸಿರಿವಂತೆಯಾಗಿರಲಿಲ್ಲ, ಯಾವುದೇ ಹುದ್ದೆ ಗಳಿಸಿರಲಿಲ್ಲ, ಯಜಮಾನಿಕೆಯ ಅಹಮ್ಮಿಕೆಯನ್ನು ಎಂದೂ ತೋರಲಿಲ್ಲ. ಆದರೆ ಆಕೆ ನಮ್ಮೂರಿನ ತಾಯಿ ಮನಸ್ಸಿನ ಹೆಂಗಸು. ನಮ್ಮ ನೆರೆಮನೆಯವರೇ ಆದ ಸಾಧು ಅಕ್ಕನನ್ನು ನಾವು ಚಿಕ್ಕಂದಿನಿಂದಲೂ ಕೆಲಸಕ್ಕೆ ಬರುವ ಹೆಂಗಸಾಗಿ ನೋಡುತ್ತಲೇ ಬೆಳೆದವರು.

ಹಾಗೆಯೇ ಅದೆಷ್ಟೋ ಮನೆ-ಮನಸ್ಸುಗಳಿಗೆ ಹತ್ತಿರವಾದವರು. ಅದು ನಮ್ಮ ಮನೆ, ನಮ್ಮ ಊರಷ್ಟೇ ಅಲ್ಲ, ಸುತ್ತಮುತ್ತಲಿನ ಹಳ್ಳಿಗಳಲ್ಲೆಲ್ಲಾ ಆಕೆ ಮಾಡಿದ ಕೆಲಸದ ಬೆವರ ಹನಿಯ ಘಮಲಿದೆ. ಬಸಿದ ಶ್ರಮದ ಕಾವು ಅಡಗಿದೆ. ಆ ಮಟ್ಟಿಗೆ ಆಕೆ ಜೀವನಪೂರ್ತಿ ಕೆಲಸ ಮಾಡುತ್ತಲೇ ತನ್ನ ಜೀವವನ್ನು ತೇದವಳು.

ಕೆಲಸವೇ ತನ್ನ ಸರ್ವಸ್ವ ಎಂದು ಬಗೆದವಳು. ಎಲ್ಲೇ ಯಾರದೇ ಕೆಲಸವೇ ಆಗಲಿ ಅದನ್ನು ತನ್ನದೇ ಮನೆಯ ಕೆಲಸ ಎಂಬಂತೆ ಭಾವಿಸಿ ಮಾಡಿದವಳೇ ಹೊರತು, ಕೊಡುವ ದುಡ್ಡಿಗೋ, ಕೂಲಿಗೋ ಸೀಮಿತವಾದ ಕೆಲಸ ಆಕೆಯದ್ದು ಎಂದೂ ಆಗಿರಲಿಲ್ಲ, ತಾನೊಬ್ಬಳು ಕಾರ್ಮಿಕ ವರ್ಗದವಳು ಎಂಬ ಭಾವನೆಯೂ ಆಕೆಯಲ್ಲಿ ಮೂಡಲಿಲ್ಲ!

**ಎಲ್ಲಾ ಕೆಲಸ ಗೊತ್ತು:** ಸಾಧು ಅಕ್ಕ ಕೆಲಸಕ್ಕೆ ಬಂದಳೆಂದರೆ ಮನೆಯವರೇ ಆ ಕೆಲಸದಲ್ಲಿ ತೊಡಗಿಸಿಕೊಂಡಂತೆ. ಗದ್ದೆಗೆ ಗೊಬ್ಬರ ಹಾಕುವಾಗ ಗುಡಿ(ಗುಪ್ಪೆ) ದೂರ ದೂರ ಹಾಕಿದರೆ, ತಾನೇ ಇಷ್ಟು ದೂರ ಹಾಕಿದರೆ ನಲು ಸಾಕಾತಿಲ್ಲ ಎಂದು ಬೈದು ಹತ್ತಿರಕ್ಕೆ ಹಾಕಿಸುತ್ತಿದ್ದಳು. ಕೊಯ್ಲು ಆಗಿ ಕೆಯ್ ಕಟ್ಟುವಾಗ ಒಂದೇ ಒಂದು ಹುಲ್ಲಿನ ತೆನೆ ಕೆಳಗೆ ಬಿದ್ದರೂ ಹೆಕ್ಕಿ ಹೊರೆಗೆ ಸೇರಿಸುತ್ತಿದ್ದಳು, ಕಳೆಗದ್ದೆಗೆ ಇಳಿದರೆ ಮತ್ತಲ್ಲಿ ಒಂದೂ ಕಳೆಯೂ ಉಳಿಯಬಾರದು, ಹುಲ್ಲು ಜಪ್ಪಲು ಬಂದರೆ ಆ ಸೂಡಿ ಅಷ್ಟು ಅಂದಗಟ್ಟಬೇಕು ಅಲ್ಲಿಯ ತನಕ ಆಕೆ ತಾನೆಂದೂ ರಾಜಿ ಆಗುತ್ತಲೇ ಇರಲಿಲ್ಲ. ಯಾರದೋ ಮನೆಯ ದರಲೆ (ತರಗೆಲೆ) ಗುಡಿಸುವಾಗಲೂ ಹಾಡಿಯ ಮೂಲೆ ಮೂಲೆಯನ್ನೂ ಬಿಡದೇ ಎಳೆದು ಒಟ್ಟುಗೂಡಿಸುತ್ತಿದ್ದಳು.

ಹೀಗೆ ನಟ್ಟಿ, ಕೊಯ್ಲು, ಸುಡುಮಣ್ಣು, ಕಳೆ ಕೀಳುವುದು, ಹುಲ್ಲು ಜಪ್ಪುವುದು, ದರಲೆ ಒಟ್ಟುಗೂಡಿಸುವುದು, ಮಣ್ಣು ಹೊರುವುದು, ತೋಟ ಸ್ವಚ್ಛಗೊಳಿಸುವುದು, ಕಟ್ಟಿಗೆ ಕಡಿಯುವುದು ಯಾವುದೇ ಕೆಲಸ ಎಂದರೂ ಅಲ್ಲಿ ಸೀರೆಯನ್ನು ಕೊಂಚ ಮೇಲಕ್ಕೆ ಎತ್ತಿಕಟ್ಟಿ, ಮೇಲೊಂದು ಪುರುಷರ ಪೂರ್ಣ ತೋಳಿನ ಅಂಗಿ ತೊಟ್ಟು, ತಲೆಗೆ ಮಂಡೆಹಾಳೆ ಹಾಕಿಕೊಂಡು ಬರುವ ಸಾಧು ಅಕ್ಕನ ಚಿತ್ರವೇ ಕಣ್ಣ ಮುಂದೆ ಬರುತ್ತದೆ. ಎಲ್ಲರೂ ದಿನದಂತ್ಯದ ಸೂರ್ಯನ ಚಲನೆಯನ್ನೋ, ಸಂಜೆ ಆರು ಗಂಟೆಗೆ ಬರುವ ಬಸ್‌ನ ಹಾರ್ನ್‌ನ ದನಿಗೋ ತಮ್ಮ ಕೆಲಸ ಮುಗಿಸಲು ಅನುವಾದರೆ, ಸಾಧು ಅಕ್ಕ ಮಾತ್ರ ಹಿಡಿದ ಕೆಲಸ ಪೂರ್ಣಗೊಳ್ಳುವುದೇ ದಿನದ ಕೆಲಸ ನಿಲ್ಲಿಸಲು ಪ್ರಶಸ್ತ ಕಾಲ ಎಂದು ಭಾವಿಸುತ್ತಿದ್ದಳು. ಅದೇ ಕಾರಣಕ್ಕೆ ಆಕೆ ಇತರೆ ಕೆಲಸಗಾರರಿಂದ ಬೈಸಿಕೊಂಡಿದ್ದೂ ಇದೆ, ಮೂಗು ಮೂರಿಸಿ ಕೊಂಡಿದ್ದೂ, ಕರುಬಿಸಿಕೊಂಡಿದ್ದೂ ಇದೆ. ಆದರೂ ಆಕೆಯ ನಿಷ್ಠೆ ಮಾತ್ರ ಕೊಂಚವೂ ಬದಲಾಗುತ್ತಿರಲಿಲ್ಲ. ಎಷ್ಟೋ ಬಾರಿ ಆಕೆಗೆ ಸಂಬಳ ಕೊಡುವಾಗಲೋ, ಕೆಲಸದ ಕೊಚ್ಚು (ಮಾಡಿದ ಕೆಲಸಕ್ಕೆ ಕೂಲಿ ರೂಪದಲ್ಲಿ ನೀಡುವ ಅಕ್ಕಿ, ಭತ್ತ) ನೀಡುವಾಗಲೋ ಆಕೆ ಮಾಡಿದ ಕೆಲಸಕ್ಕೆ ಅದರ ಸ್ವರೂಪಕ್ಕೆ ನಾವು ಕೊಡುತ್ತಿರುವುದು ಬಹಳ ಕಡಿಮೆಯೇ ಎಂದೆನಿಸುತ್ತಿತ್ತು.

ಹಾಗಂತ ಹೆಚ್ಚಿಗೆ ಕೊಡಲು ಹೋದರೆ, ಎಂದೂ ಕೈಯ್ಯೊಡ್ಡದೇ ಎಂತಾ ಇದ್ ನಾ ಏನ್ ಹೊರಗಿನಳಾ..ಬ್ಯಾಡ್ ಬ್ಯಾಡ... ಸುಮ್ನ್ ಆಯ್ಕೋ ಎನ್ನುತ್ತಾ ಹುಸಿ ಮುನಿಸು ತೋರಿ, ಪರಮ ಸ್ವಾಭಿಮಾನಿಯಂತೆ ಕಾಣುತ್ತಿದ್ದಳು.

**ಬೇಯಿಸಿದ ಅವಡೆಯ ಘಮಲು:** ಸುಮಾರು ಎರಡು ದಶಕಗಳ ಹಿಂದೆ, ಅದೊಂದು ವಿಷಮ ಗಳಿಗೆಯಲ್ಲಿ, ಇಡೀ ಊರಲ್ಲಿ ಆಕೆಗೆ ಕೆಲಸವನ್ನೇ ಮಾಡದಂಥ ದುಃಸ್ಥಿತಿ ಬಂದಾಗಲೂ ಆಕೆ ಬೆದರಲಿಲ್ಲ, ಕುಸಿತು ಕುಳಿತಿರಲಿಲ್ಲ. ಬದಲಿಗೆ ಬೇರೆ ಬೇರೆ ಅಕ್ಕಪಕ್ಕದ ಊರುಗಳಿಗೆಲ್ಲ ತೆರಳಿ, ದುಡಿಮೆಯೇ ತನ್ನ ಬದುಕು ಅದನ್ನು ಹೇಗೋ ದಕ್ಕಿಸಿಕೊಂಡೇ ತೀರುತ್ತೇನೆ ಎಂದು ಅಕ್ಷರಶಃ ಕೆಲಸದ ಮೂಲಕವೇ ಸವಾಲೆಸೆದು ಗೆದ್ದ ಗಟ್ಟಿಗಿತ್ತಿ. ಆಗೆಲ್ಲ ಚಿಕ್ಕಮಕ್ಕಳಾಗಿದ್ದ ನಮಗೆ, ಅವರ್ಯಾಕೆ ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿಲ್ಲ ಎನ್ನುವುದೇ ಒಂದು ದೊಡ್ಡ ಬಿಡಿಸಲಾಗದ ಒಗಟಿನಂತೆ ಕಾಡುತ್ತಿತ್ತು. ಆದರೂ ಅಲ್ಲೆಲ್ಲೋ ಕೆಲಸ ಮುಗಿಸಿ ಬರುವಾಗ ಮಂಡೆ ಹಾಳೆಯ ಒಳಗೆ ಹಾಕಿಕೊಂಡು ತರುತ್ತಿದ್ದ ಹಲಸಿನ ಹಣ್ಣಿನ ತೊಳೆಯನ್ನೂ, ಬೇಯಿಸಿದ ಅವಡೆಯನ್ನೋ, ಘಮಘಮಿಸುವ ಮಾವಿನ ಹಣ್ಣನ್ನೋ ನೀಡಿ ಅಕ್ಕರೆಯ ನಗೆಯಾಡುತ್ತಿದ್ದಳು. ಕೊನೆಗೊಮ್ಮೆ ಆ ಘಟನೆ ಸುಖಾಂತ್ಯ ಕಂಡಾಗಲೇ ಅದೆಷ್ಟೋ ಜನ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದು.

ಯಾರದೇ ಮನೆಯ ಕೆಲಸಕ್ಕೆ ಹೋದರೂ ಆಕೆಗೆ ತಾನು ಆ ಮನೆಯ ಕೆಲಸಕ್ಕೆ ಹೋದವಳು ಅಷ್ಟೇ ಎಂಬ ಭಾವ ಎಂದೂ ಅವಳ ಕಾರ್ಯವೈಖರಿಯಲ್ಲೋ, ಮನೋಭಾವದಲ್ಲೋ ಇಣುಕುತ್ತಿರಲಿಲ್ಲ. ಬದಲಿಗೆ ತಾನೂ ಆ ಮನೆಯ, ಅಲ್ಲಿ ನಡೆಯುವ ಕೆಲಸದ ಒಂದು ಬಹುಮುಖ್ಯ ಭಾಗ ಎಂದೇ ಭಾವಿಸುತ್ತಿದ್ದಳು. ಅದರಂತೆ ನಡೆದುಕೊಳ್ಳುತ್ತಿದ್ದಳೂ ಕೂಡಾ.


ಕೆಲಸಕ್ಕೆ ಬಂದರೂ ಕುಡಿಯುವ ನೀರು, ಜೊತೆಗೆ ನೀಡುವ ಬೆಲ್ಲದ ಚೂರು, ಬೆಳಗ್ಗಿನ ತಿಂಡಿ - ಚಾ, ಮಧ್ಯಾಹ್ನದ ಊಟ ಅದನ್ನೆಲ್ಲಾ ಎಲ್ಲರಿಗೂ ಬಡಿಸುವುದು, ಅದರ ಪೂರ್ವಸಿದ್ಧತೆ ಎಲ್ಲವನ್ನೂ ತಾನೇ ಖುದ್ದು ಮುಂದೆ ನಿಂತು ನೋಡಿಕೊಳ್ಳುತ್ತಿದ್ದಳು. ಎಲ್ಲರಿಗೂ ಬಡಿಸಿ ಕೊನೆಗೆ ತಾನೊಂದು ಬದಿಯಲ್ಲಿ ಕೂತು ಗಬಗಬನೇ ತಿಂದು ಮತ್ತೆ ಕೆಲಸಕ್ಕೆ ಸಜ್ಜಾಗುತ್ತಿದ್ದಳು. ಅಂದರೆ ಕಾಯಕವೇ ಕೈಲಾಸ ಎಂದು ಅವಳೆಂದೂ ಎಲ್ಲೂ ಓದಿಲ್ಲ, ಬಹುಶಃ ಕೇಳಿರಲಿಕ್ಕೂ ಇಲ್ಲ, ಆದರೆ ಅದನ್ನೇ ಉಸಿರಾಡಿಕೊಂಡು ಬದುಕಿ ಬಂದವಳು

ಊರಲ್ಲಿ ಎಲ್ಲೇ ಯಾರದೇ ಮನೆಯಲ್ಲಿ ಕಾರ್ಯಕ್ರಮಗಳು ಇದ್ದರೂ, ತೀರಾ ಇತ್ತೀಚಿನವರೆಗೂ ಕಾರ್ಯಕ್ರಮದ ಮುನ್ನಾ ದಿನಗಳಲ್ಲಿ, ಆ ದಿನದ ಬೆಳಗ್ಗೆ, ಕಾರ್ಯಕ್ರಮದ ತರುವಾಯದ ಎಲ್ಲಾ ಕೆಲಸಗಳಲ್ಲೂ ಸಾಧಕ್ಕ ತನ್ನನ್ನು ತಾನು ಸ್ವಯಂಪ್ರೇರಣೆಯಿಂದ ತೊಡಗಿಸಿಕೊಳ್ಳುತ್ತಿದ್ದಳು.

ಅಯ್ಯೋ ಕಾರ್ಯಕ್ರಮಕ್ಕೆ ಬಂದೇ ಸಾಕಾಯ್ತು, ಊಟ ಮಾಡಿಯೇ ಸುಸ್ತಾಯ್ತು ಎಂದು ವಟಗುಟ್ಟುವವರ ನಡುವೆ ಸಾಧು ಅಕ್ಕ ಎಂದೂ ಅದನ್ನೆಲ್ಲಾ ಉಸುರಿದವಳೇ ಅಲ್ಲ. ತೊಟ್ಟ ಹೊಸ ಸೀರೆಯ ನೆರಿಗೆಯನ್ನು ಮೇಲಕ್ಕೆ ಎತ್ತಿ ಸಿಕ್ಕಿಸಿಕೊಂಡು ಮತ್ತೆ ಅಲ್ಲಿನ ಸಣ್ಣಪುಟ್ಟ ಕೆಲಸಗಳಿಗೆ ಕಾರ್ಯಕ್ರಮದ ಮನೆಯವರ ಜೊತೆ ಕೈ ಜೋಡಿಸಬೇಕು. ಆಗಲೇ ಆಕೆಗೆ ಸಮಾಧಾನ, ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಆಕೆಯ ಪಾಲಿಗೆ ಸಂಪೂರ್ಣಗೊಳ್ಳುವುದೇ ಹಾಗೆ. ಆಕೆಯ ಆ ಶ್ರಮಕ್ಕೆ, ಅದರ ಹಿಂದಿನ ಬದ್ಧತೆಗೆ ಯಾವ ಬೆಲೆ ತಾನೇ ಕಟ್ಟಲಾದೀತು. ಅದಕ್ಕೆಂದು ನಾವು ಕೊಟ್ಟ ಕೆಲವು ನೂರುಗಳೋ, ಹೊಸ ಸೀರೆಯೋ ಇನ್ನೊಂದೋ ಮತ್ತೊಂದೋ ಆಕೆಯ ಕೆಲಸದ ನಿಷ್ಠೆಯ ಮುಂದೆ ತೀರಾ ಚಿಕ್ಕದು ಎಂದು ಯಾವಾಗಲೂ ಅನಿಸುತ್ತದೆ.



> ವಿಧಿಯ ಲೆಕ್ಕಾಚಾರವೇ ಬೇರೆ ಇತ್ತೆನಿಸುತ್ತದೆ. ಬದುಕಿನ ಕೊನೆಯ ದಿನಗಳಲ್ಲಿ ಸಾಧಕ್ಕ ಹಾಸಿಗೆ ಹಿಡಿಯುವಂತೆ ಮಾಡಿ, ತನ್ನ ಆಶಯದಲ್ಲಿ ಆಕೆ ಸೋಲೊಪ್ಪಿಕೊಳ್ಳುವಂತೆ ಮಾಡಿತ್ತು. ಮೊನ್ನೆ ಮೊನ್ನೆ ಹೋಗಿ ನೋಡಿದ್ದಾಗ ಸಾಧಕ್ಕನ ಎಂದಿನ ನಗು ಮಾಸಿತ್ತು, ದೇಹ ಬಳಲಿತ್ತು, ಕೈಗಳು ಸೋತಿದ್ದವು, ನೋಟದಲ್ಲಿ ಅಸಹಾಯಕತೆ ಮಡುಗಟ್ಟಿತ್ತು.




ಕೆಲಸ ಮುಗಿಸಿ ಬಾಳೆಲೆಯ ಮುಂದೆ ಕುಳಿತರೆ, 3-4 ಸೌಟು ಅನ್ನವನ್ನು ನಿರುಮ್ಮಳತೆಯಿಂದ ಉಂಡೇಳುತ್ತಿದ್ದ ಸಾಧು ಅಕ್ಕ, ಮೊನ್ನೆ ಮೊನ್ನೆ ಕೇವಲ ಎರಡೂವರೆ ಚಮಚ ನೀರನ್ನು ಕಡೆ ಬಾಯಿಯಲ್ಲಿ ಅರೆಬರೆಯಾಗಿ ನುಂಗಿ ಒಳಗೊಳಗೇ ನೋಯುತ್ತಿದ್ದುದನ್ನು ನೋಡಿಯೂ, ಆ ವಿಧಿಯನ್ನು ಹೇಗೆ ಶಪಿಸದೇ ಇರುವುದು? ಆಕೆ ಉಸಿರು ಚೆಲ್ಲಿ, ತನ್ನನ್ನು ಕಾಡುತ್ತಿದ್ದ ನೋವಿನಿಂದ ಮುಕ್ತಿ ಪಡೆದಳು.

ಆಕೆ ತನ್ನ ಜೀವಮಾನವಿಡಿ ಬಸಿದ ಶ್ರಮದ ಹರಿವು ಯಾವ್ಯಾವುದೋ ತೋಟ, ಗದ್ದೆ, ತೋಡು, ಬದು, ಹಾಡಿ, ಮಕ್ಕಿಗದ್ದೆ, ಅಂಗಳ, ಮನೆ, ಗುಡ್ಡೆ, ರಸ್ತೆ, ಹಾದಿ ಹಾದಿಗಳಲ್ಲಿ ತಣ್ಣಗೆ ಪ್ರವಹಿಸಿದಂತೆ ಅನಿಸುತ್ತದೆ. ಇನ್ನು ಯಾರೋ ಬರುತ್ತಾರೆ, ಕೆಲಸಗಳೂ ನಡೆಯುತ್ತವೆ. ಆದರೆ ಸಾಧು ಅಕ್ಕ ಇಲ್ಲವೆಂಬ ಕೊರತೆಯೊಂದು ಹಾಗೆಯೇ ಉಳಿದು ಹೋಗುತ್ತದೆ.

**ಕೆಲಸದ ಮೂಲಕ ಬಂಧುತ್ವ!:** ಸಾಧು ಅಕ್ಕ ಬೇರೆಯವರ ಮನೆಯ ಹೆಂಗಸು, ಇನ್ನಾರದೋ ತಾಯಿ. ಮತ್ತಾರದೋ ಅಕ್ಕ. ಆದರೆ ಆಕೆಯೊಳಗಿನ ಬಂಧುತ್ವ, ಕಾರುಣ್ಯ, ಅಕ್ಕರೆ, ಕಾಳಜಿ ಪರಿಶುದ್ಧ ಮಮಕಾರಗಳು ಆಕೆಯ ತಾಯ್ತನದ ವ್ಯಾಪ್ತಿಯನ್ನು ಇನ್ನಷ್ಟು ಮತ್ತಷ್ಟು ವಿಸ್ತರಿಸಿದೆ. ಊರು ಅದನ್ನು ಉಸಿರಾಡಿದೆ. ಕೆಲಸ, ಕೆಲಸಗಾರರು ಹಾಗೂ ಅದರ ಸ್ವರೂಪಗಳು ಊಹಿಸಲ ಸಾಧ್ಯ ಬದಲಾವಣೆಗೆ ಒಳಗಾಗಿ ನಲುಗುತ್ತಿರುವ ಈ ಹೊತ್ತಲ್ಲಿ ಸಾಧು ಅಕ್ಕ ಅಂಥದ್ದೊಂದು ಉದಾತ್ತ ಮಾದರಿಗೆ ಅಪರೂಪದ ಉದಾಹರಣೆಯಂತಿದ್ದವಳು.

ಎಂತೆಂಥ ಬಾಂಧವ್ಯಗಳೇ ಬರಡಾಗುವ ಹೊತ್ತಲ್ಲೂ ತನ್ನ ಗೇಯ್ಮೆಯ ಮೂಲಕವೇ ಬಂಧುತ್ವಕ್ಕೆ ಅತ್ಯಂತ ಸಹಜವಾಗಿ ಆತುಕೊಂಡವಳು. ಕೆಲಸದ ಮೂಲಕವೇ ಹತ್ತಿರವಾಗಿ ಮತ್ತು ಆ ಕೆಲಸವನ್ನೇ ಉಸಿರಾಡಿಕೊಂಡಿದ್ದ ಸಾಧಕ್ಕನ ಉಸಿರು ನಿಂತಿದೆ ಎಂದರೆ ನಿಂತದ್ದು ಬರೀ ಉಸಿರಷ್ಟೇ ಅಲ್ಲ ಎಂದು ಮತ್ತೆ ಮತ್ತೆ ಅನಿಸದೇ ಇರದು!

**- ಸಂದೇಶ್** ಎಚ್.ನಾಯ್ಕ್



## ಇನ್ನೊಂದು ತಿಂಗಳಲ್ಲಿ ಬರ್ತಿವೆ ಈ 6 ಬಿಗ್ ಬಜೆಟ್ ಚಿತ್ರಗಳು

ಐಪಿಎಲ್ ಫೀವರ್ ಜೋರಾಗಿರುವ ಕಾರಣ ದೊಡ್ಡ ಸಿನಿಮಾಗಳನ್ನು ಬಿಡುಗಡೆ ಮಾಡಲು ಮೀನಾಮೇಷ ಎಣಿಸುವಂತಾಗಿದೆ. ಬಹಳ ಹಿಂದೆಯೇ ಬರಬೇಕಿದ್ದ ಸಿನಿಮಾಗಳ ರಿಲೀಸ್ ಡೇಟ್ ಪದೇ ಪದೇ ಮುಂದೂಡುವಂತಾಗಿದೆ. ಮೇ 31ಕ್ಕೆ ಐಪಿಎಲ್ ಸರಣಿಗೆ ತೆರೆ ಬೀಳಲಿದೆ. ಆದರೆ ಅದಕ್ಕೂ ಮುನ್ನ 6 ದೊಡ್ಡ ಬಜೆಟ್ ಚಿತ್ರಗಳು ಪ್ರೇಕ್ಷಕರ ಮುಂದೆ ಬರ್ತಿವೆ.

ಹೌದು.. ಬಹಳ ರಿಸ್ಕ್ ತೆಗೆದುಕೊಂಡು ದೊಡ್ಡ ಸಿನಿಮಾಗಳನ್ನು ಐಪಿಎಲ್ ನಡುವೆ ತೆರೆಗೆ ತರುವ ಪ್ರಯತ್ನ ನಡ್ತೀದೆ. ಮಾರ್ಚ್ 19ಕ್ಕೆ ಬರಬೇಕಿದ್ದ ಟಾಕ್ಸಿಕ್ ಜೂನ್ 4ಕ್ಕೆ ಬರುವಂತಾಗಿದೆ. ಸಂಕ್ರಾಂತಿಗೆ ಬಿಡುಗಡೆ ಆಗಬೇಕಿದ್ದ ಜನ ನಾಯಗನ್ ಇನ್ನು ಪ್ರೇಕ್ಷಕರ ಮುಂದೆ ಬಂದಿಲ್ಲ. ಈ ವಾರ ತೆರೆಗಪ್ಪಳಿಸಬೇಕಾದ ಪೆದ್ದಿ ಜೂನ್ 25ಕ್ಕೆ ಬರುವಂತಾಗಿದೆ. ಹಾಗಿದ್ದರೆ ಇನ್ನೊಂದು ತಿಂಗಳಲ್ಲಿ ಬರುವ ಬಹುನಿರೀಕ್ಷಿತ ಚಿತ್ರಗಳು ಯಾವುವು ಮುಂದೆ ಓದಿ.

1. ಕೆಡಿ: ದಿ ಡೆವಿಲ್ ಪ್ರೇಮ್ ನಿರ್ದೇಶನದಲ್ಲಿ ಧ್ರುವ ಸರ್ಜಾ ನಟನೆಯ ಕೆಡಿ: ದಿ ಡೆವಿಲ್ ಸಿನಿಮಾ ಏಪ್ರಿಲ್ 30ಕ್ಕೆ ತೆರೆಗೆ ಬರ್ತಿದೆ. ಕೆವಿಎನ್ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಸಿನಿಮಾ ನಿರ್ಮಾಣವಾಗಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ 5 ಭಾಷೆಗಳಲ್ಲಿ ಸಿನಿಮಾ ಬಿಡುಗಡೆ ಆಗ್ತಿದೆ. ಈಗಾಗಲೇ ಟ್ರೈಲರ್, ಸಾಂಗ್ಸ್ ಹಿಟ್ ಆಗಿ ಗಮನ ಸೆಳೆದಿದೆ. ಅಡ್ವಾನ್ ಟಿಕೆಟ್ ಬುಕ್ಕಿಂಗ್ ಕೂಡ ಶುರುವಾಗಿದೆ. ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ಚಿತ್ರದ ತಾರಾಗಣದಲ್ಲಿದ್ದಾರೆ. 4 ವರ್ಷಗಳ ಹಿಂದೆ ಶುರುವಾಗಿದ್ದ ಕೆಡಿ ಸಿನಿಮಾ ಅಂತೂ ಇಂತೂ ಈ ವಾರ ರಿಲೀಸ್ ಆಗ್ತಿದೆ. 70-80ರ ದಶಕದ ಬೆಂಗಳೂರು ಭೂಗತಲೋಕದ ಕಥೆಯನ್ನು ಪ್ರೇಮ್ ಕಟ್ಟಿಕೊಟ್ಟಿದ್ದಾರೆ.

2. ಕಾರ ವಿಘ್ನೇಶ್ ರಾಜ ನಿರ್ದೇಶನದಲ್ಲಿ ಧನುಷ್ ನಟನೆಯ ಕಾರ ಚಿತ್ರಕ್ಕೂ ಈ ವಾರವೇ ಬಿಡುಗಡೆ ಭಾಗ್ಯ. ತಮಿಳು ಹಾಗೂ ತೆಲುಗಿನಲ್ಲಿ ಈ ಆಕ್ಷನ್ ಥ್ರಿಲ್ಲರ್ ಸಿನಿಮಾ ಬಿಡುಗಡೆ ಆಗ್ತಿದೆ. ಮಮಿತಾ ಬೈಜು, ಕೆ.ಎಸ್ ರವಿಕುಮಾರ್, ಜಯರಾಮ್, ಪೃಥ್ವಿರಾಜನ್ ಚಿತ್ರದಲ್ಲಿ ನಟಿಸಿದ್ದಾರೆ. ವೆಲ್ಸ್ ಫಿಲ್ಮ್ ಇಂಟರ್‌ನ್ಯಾಷನಲ್ ಥಿಂಕ್ ಸ್ಟುಡಿಯೋಸ್ ಸಂಸ್ಥೆ ನಿರ್ಮಾಣದ ಚಿತ್ರವನ್ನು ರೆಡ್ ಜೈಂಟ್ಸ್ ಮೂವೀಸ್ ಸಂಸ್ಥೆ ತೆರೆಗೆ ತರ್ತಿದೆ.

3. ಜನ ನಾಯಗನ್ ದಳಪತಿ ವಿಜಯ್ ನಟನೆಯ ಜನ ನಾಯಗನ್ ಸಿನಿಮಾ ನಾನಾ ಕಾರಣಗಳಿಂದ ಸುದ್ದಿ ಆಗ್ತಿದೆ. ಸುಗ್ಗಿ ಸಂಭ್ರಮದಲ್ಲೇ ತೆರೆಗೆ ಬರಬೇಕಿದ್ದ ಸಿನಿಮಾ 4 ತಿಂಗಳು ಕಳೆದರೂ ಬಿಡುಗಡೆ ಆಗಿಲ್ಲ.

ಸೆನ್ಸಾರ್ ಸಮಸ್ಯೆ, ತಮಿಳುನಾಡು ಚುನಾವಣೆ ಇದಕ್ಕೆ ಪ್ರಮುಖ ಕಾರಣವಾಗಿತ್ತು. ಚುನಾವಣೆ ಮುಗಿದಿದೆ. ಸೆನ್ಸಾರ್ ಸಮಸ್ಯೆ ಶೀಘ್ರದಲ್ಲೇ ಬಗೆ ಹರಿಯಲಿದ್ದು ಇನ್ನೆರಡು ವಾರಗಳಲ್ಲಿ ಚಿತ್ರ ತೆರೆಗೆ ಬರುವ ನಿರೀಕ್ಷೆಯಿದೆ.

4. ಕರುಪ್ಪು ಸೂರ್ಯ ನಟನೆಯ ಸಿನಿಮಾಗಳು ಒಂದೊಂದಾಗಿ ಮುಗ್ಗರಿಸುತ್ತಿವೆ. ಸದ್ಯ ಕರುಪ್ಪು ಸಿನಿಮಾ ಮೂಲಕ ಮತ್ತೆ ಪ್ರೇಕ್ಷಕರನ್ನು ರಂಜಿಸಲು ಸೂರ್ಯ ಸಜ್ಜಾಗಿದ್ದಾರೆ. ಆರ್. ಜೆ ಬಾಲಾಜಿ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ತ್ರಿಷಾ ನಾಯಕಿಯಾಗಿ ನಟಿಸಿದ್ದು ಯೋಗಿ ಬಾಬು, ಸುಪ್ರೀತ್ ರೆಡ್ಡಿ, ಮನ್ಸೂರ್ ಅಲಿಖಾನ್ ತಾರಾಗಣದಲ್ಲಿದ್ದಾರೆ. ಮೇ 14ರಂದು ಸಿನಿಮಾ ತೆರೆಗೆ ಬರಲಿದೆ.

5. ಧ್ರುವ ನಚ್ಚತ್ತಿರಂ ದಶಕದ ಹಿಂದೆ ನಿರ್ಮಾಣವಾಗಿದ್ದ ತಮಿಳಿನ ಧ್ರುವ ನಚ್ಚತ್ತಿರಂ ಇನ್ನು ಬಿಡುಗಡೆ ಆಗಿಲ್ಲ. ಚಿಯಾನ್ ವಿಕ್ರಂ ನಟನೆಯ ಸ್ಪೈ ಆಕ್ಷನ್ ಥ್ರಿಲ್ಲರ್ ಸಿನಿಮಾ ಮೇ ತಿಂಗಳಲ್ಲಿ ಬಿಡುಗಡೆ ಆಗಬಹುದು ಎನ್ನಲಾಗ್ತಿದೆ. ಅಧಿಕೃತವಾಗಿ ಈ ಬಗ್ಗೆ ಮಾಹಿತಿ ಇಲ್ಲ. ಗೌತಮ್ ವಾಸುದೇವ್ ಮೆನನ್ ನಿರ್ದೇಶನದ ಚಿತ್ರದಲ್ಲಿ ರಿತು ವರ್ಮಾ ನಾಯಕಿಯಾಗಿ ಮಿಂಚಿದ್ದಾರೆ.

6. ಹೈ ಜವಾನಿ ತೋ ಇಷ್ಕ್ ಹೋನಾ ಹೈ ಧುರಂಧರ್-2 ಬಳಿಕ ಬಾಲಿವುಡ್ ಅಂಗಳದಲ್ಲಿ ಕೂಡ ಯಾವುದೇ ದೊಡ್ಡ ಸಿನಿಮಾ ಬಿಡುಗಡೆ ಆಗಲಿಲ್ಲ. ಸ್ಟಾರ್ ನಟರ ಸಿನಿಮಾಗಳು ತೆರೆಗೆ ಬರಲು ಸಜ್ಜಾಗಿಲ್ಲ. ಇದ್ದಿದ್ದರಲ್ಲಿ ಹೈ ಜವಾನಿ ತೋ ಇಷ್ಕ್ ಹೋನಾ ಹೈ ಸಿನಿಮಾ ಕೊಂಚ ನಿರೀಕ್ಷೆ ಮೂಡಿಸಿದೆ. ವರುಣ್ ಧವನ್ ಜೊತೆ ಮೃಣಾಲ್ ಠಾಕೂರ್ ಹಾಗೂ ಪೂಜಾ ಹೆಗ್ಡೆ ನಾಯಕಿಯರಾಗಿ ನಟಿಸಿದ್ದಾರೆ. ಮೇ 22ಕ್ಕೆ ಈ ಸಿನಿಮಾ ತೆರೆಗೆ ಬರಲಿದೆ.

## ಮ್ಯಾಂಗೋ ಪಚ್ಚ ಮಾಸ್ ಎಂಟ್ರಿಗೆ ಕೌಂಟ್‌ಡೌನ್ ಶುರು!

### ಹೈಲೈಟ್ಸ್:

- ಜೂನ್ 5ಕ್ಕೆ ಕಿಚ್ಚ ಸುದೀಪ್ ಅಳಿಯನ ಮ್ಯಾಂಗೋ ಪಚ್ಚ ರಿಲೀಸ್
- ಮೈಸೂರು ಹಿನ್ನೆಲೆಯ ನೈಜ ಘಟನೆಗಳ ಕ್ರೈಂ ಥ್ರಿಲ್ಲರ್ ಮ್ಯಾಂಗೋ ಪಚ್ಚ
- ವಿವೇಕ್ ನಿರ್ದೇಶನದಲ್ಲಿ ಮೂಡಿಬಂದ ಚೊಚ್ಚಲ ಸಿನಿಮಾ

ಕಿಚ್ಚ ಸುದೀಪ್ ಅಳಿಯ ಸಂಚಿತ್ ಸಂಜೀವ್ ಅಭಿನಯದ ಬಹುನಿರೀಕ್ಷೆಯ ಮ್ಯಾಂಗೋ ಪಚ್ಚ ಚಿತ್ರದ ರಿಲೀಸ್ ಡೇಟ್ ಅನೌನ್ಸ್ ಆಗಿದೆ. ಸಿನಿಮಾ ರಿಲೀಸ್ ಯಾವಾಗ ಎಂದು ಅಭಿಮಾನಿಗಳು ಪ್ರಶ್ನಿಸುತ್ತಿದ್ದರು. ಇದೀಗ ಅಭಿಮಾನಿಗಳ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಭಾರೀ ನಿರೀಕ್ಷೆ ಮೂಡಿಸಿರುವ ಮ್ಯಾಂಗೋ ಪಚ್ಚ ಸಿನಿಮಾ ಜೂನ್ 5ಕ್ಕೆ ರಿಲೀಸ್ ಆಗುತ್ತಿದೆ.

ಕಿಚ್ಚ ಸುದೀಪ್ ಅವರ ಕುಟುಂಬದಿಂದ ಮತ್ತೊಬ್ಬ ಪ್ರತಿಭೆ ಬೆಳ್ಳಿತೆರೆಗೆ ಪಾದಾರ್ಪಣೆ ಮಾಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ಕಿಚ್ಚನ ಅಳಿಯ ಸಂಚಿತ್ ಸಂಜೀವ್ ನಾಯಕನಾಗಿ ನಟಿಸಿರುವ ಬಹುನಿರೀಕ್ಷಿತ ಸಿನಿಮಾ ಮ್ಯಾಂಗೋ ಪಚ್ಚ ಈಗ ರಿಲೀಸ್‌ಗೆ ಸಜ್ಜಾಗಿದೆ. ಹಲವು ದಿನಗಳಿಂದ ಸಿನಿಮಾ ರಿಲೀಸ್ ಯಾವಾಗ? ಎಂದು ಕೇಳುತ್ತಿದ್ದ ಅಭಿಮಾನಿಗಳ ಕುತೂಹಲಕ್ಕೆ ಕೊನೆಗೂ ತೆರೆ ಬಿದ್ದಿದೆ. ಜೂನ್ 5ರಂದು ಮ್ಯಾಂಗೋ ಪಚ್ಚ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

### ಜೂನ್ 5ರಿಂದ ಥಿಯೇಟರ್‌ಗಳಲ್ಲಿ ಸಂಚಿತ್ ಸಂಜೀವ್ ಅಬ್ಬರ

ಈಗಾಗಲೇ ಟೀಸರ್ ಮತ್ತು ರೆಟ್ರೋ ಲುಕ್ ಮೂಲಕ ಅಭಿಮಾನಿಗಳ ನಿರೀಕ್ಷೆ ಹೆಚ್ಚಿಸಿರುವ ಸಂಚಿತ್‌ನನ್ನ ದೊಡ್ಡ ಪರದೆ ಮೇಲೆ ನೋಡಲು ಕಾತರದಿಂದ ಕಾಯುತ್ತಿದ್ದರು. ಕೊನೆಗೂ ಆ ದಿನ ಬಹಿಂಗವಾಗಿದ್ದು, ಸಂಚಿತ್ ಮೊದಲ ಬಾರಿಗೆ ತೆರೆಮೇಲೆ ಅಬ್ಬರಿಸಲು ಸಜ್ಜಾಗಿದ್ದಾರೆ. ಈ ಮೂಲಕ ಸಂಚಿತ್ ಸಿನಿಮಾರಂಗದಲ್ಲಿ ಮಾವನ ಲೆಗೆಸಿಯನ್ನ ಮುಂದುವರೆಸಲಿದ್ದಾರೆ.




ಮ್ಯಾಂಗೋ ಪಚ್ಚ ವಿವೇಕ ನಿರ್ದೇಶನದ ಚೊಚ್ಚಲ ಸಿನಿಮಾವಾಗಿದೆ. ಮೈಸೂರು ಮೂಲದ ಕ್ರೈಂ ಥ್ರಿಲ್ಲರ್ ಸಿನಿಮಾವಾಗಿದ್ದು, 2001 ರಿಂದ 2011ರ ಅವಧಿಯಲ್ಲಿ ಮೈಸೂರಿನಲ್ಲಿ ನಡೆದ ಪ್ರಮುಖ ಘಟನೆಗಳು ಈ ಚಿತ್ರದಲ್ಲಿದೆ. ವಿಶೇಷ ಸಂಪೂರ್ಣ ಸಿನಿಮಾ ಕರ್ನಾಟಕದಲ್ಲೇ ಶೂಟಿಂಗ್ ಆಗಿದೆ. ಅದರಲ್ಲೂ ಬಹುತೇಕ ಚಿತ್ರೀಕರಣ ಮೈಸೂರಿನಲ್ಲೇ ಮಾಡಲಾಗಿದೆ.

ಮ್ಯಾಂಗೋ ಪಚ್ಚ ಚಿತ್ರಕ್ಕೆ ಕೆಆರ್‌ಜಿ ಮತ್ತು ಕಿಚ್ಚ ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ ಜಂಟಿಯಾಗಿ ನಿರ್ಮಾಣ ಮಾಡುತ್ತಿರುವುದು ವಿಶೇಷ. ಯುವ ನಾಯಕರಿಗೆ ಕೆಆರ್‌ಜಿ ಭರವಸೆಯ ನಿರ್ಮಾಣ ಸಂಸ್ಥೆಯಾಗಿದೆ ಎಂದರೆ ತಪ್ಪಾಗಲ್ಲ. ಯಾಕೆಂದರೆ ಯುವರಾಜ್ ಕುಮಾರ್, ಸಂಚಿತ್ ಅಂತಹ ಸ್ಯಾಂಡಲ್‌ವುಡ್‌ನ ಭವಿಷ್ಯದ ಸ್ಟಾರ್‌ಗಳಿಗೆ ಕೆಆರ್‌ಜಿ ಭದ್ರ ಬುನಾದಿ ಹಾಕುತ್ತಿದೆ.

ಇನ್ನೂ ಕೆಆರ್‌ಜಿ ಸಂಸ್ಥೆ ಸಿನಿಮಾಗಳ ಆಯ್ಕೆ ವಿಚಾರದಲ್ಲೂ ತುಂಬಾ ಸೆಲೆಕ್ಟಿವ್. ಉತ್ತಮ ಸಿನಿಮಾಗಳನ್ನ ಅಭಿಮಾನಿಗಳಿಗೆ ನೀಡುತ್ತಿದೆ. ಹಾಗಾಗಿ ಕೆಆರ್‌ಜಿ ನಿರ್ಮಾಣ ಸಂಸ್ಥೆ ಮೇಲೆ ಅಭಿಮಾನಿಗಳಿಗೆ ಸಾಕಷ್ಟು ನಿರೀಕ್ಷೆ ಮತ್ತು ಉತ್ತಮ ಸಿನಿಮಾಗಳನ್ನ ನೀಡುತ್ತೆ ಎನ್ನುವ ಭರವಸೆ ಇದೆ.


ಅಂದಹಾಗೆ. ಸಂಚಿತ್ ಮೊದಲ ಸಿನಿಮಾಗೆ ನಾಯಕಿಯಾಗಿ ಕಾಜಲ್ ಕುಂದರ್ ಕಾಣಿಸಿಕೊಳ್ಳುತ್ತಿದ್ದಾರೆ. ಇನ್ನು ಉಳಿದಂತೆ ತಾರಾಗಣದಲ್ಲಿ ಮಯೂರ್ ಪಟೇಲ್, ಭಾವನಾ, ಹರಿಣಿ ಶ್ರೀಕಾಂತ್, ವಿಜಯ ರಾಘವೇಂದ್ರ, ಅವರ ಅಳಿಯ ಜೈ ಗೋಪಿನಾಥ್ ಸೇರಿದಂತೆ ಅನೇಕರಿದ್ದಾರೆ. ಶೇಖರ್ ಚಂದ್ರ ಕ್ಯಾಮೆರಾ ವರ್ಕ್ ಚಿತ್ರವಾಗಿದ್ದು, ಚರಣ್ ರಾಜ್ ಸಂಗೀತ ನಿರ್ದೇಶನ ಮಾಡಿದ್ದಾರೆ.

## ನಾನು ಕ್ರಿಯೇಟರ್ ಅಲ್ಲ.. ನಾನೊಬ್ಬ ಕಳ್ಳ; ಜೋಗಿ ಪ್ರೇಮ್

ಕೆಡಿ ದಿ ಡೆವಿಲ್ ಇಡೀ ಸಿನಿಮಾವೇ ಒಂದು ದೊಡ್ಡ ಟ್ರೈಲರ್ ಇದ್ದಂತೆ. ಸಿನಿಮಾ ನೋಡಿ ಬಂದವರು ಕಥೆಯನ್ನು ಅವರೇ ಹೆಣೆದುಕೊಳ್ಳಬೇಕು ಎಂದು ಹೇಳಿ ಅಚ್ಚರಿ ಮೂಡಿಸಿದ್ದರು. ಇನ್ನು ಕೆವಿಎನ್ ಪ್ರೊಡಕ್ಷನ್ಸ್ ನಿರ್ಮಾಣ ಮಾಡಿರುವ ಈ ಸಿನಿಮಾ ಕರ್ನಾಟಕದಾದ್ಯಂತ ಅದ್ಧೂರಿಯಾಗಿ ಏಪ್ರಿಲ್ 30ರಂದು ಬಿಡುಗಡೆಯಾಗಿದೆ.

ಜೋಗಿ ಪ್ರೇಮ್ ಸಿನಿಮಾ ಬಿಡುಗಡೆಗೂ ಮುನ್ನವೇ ಸಿಕ್ಕಾಪಟ್ಟೆ ಹೈಪ್ ಮಾಡುತ್ತವೆ. ಪ್ರೇಕ್ಷಕರನ್ನು ಥಿಯೇಟರ್‌ಗೆ ಬರುವಂತೆ ಒತ್ತಡ ಹಾಗುತ್ತವೆ. ಹಾಗೇ ಕೆಡಿ ಕೂಡ ಅಂತಹದ್ದೇ ಒಂದು ವೈಬ್ ಅನ್ನು ಕ್ರಿಯೇಟ್ ಮಾಡಿದೆ. ಆದರೆ, ಏಪ್ರಿಲ್ 30ರಂದು ಸಿನಿಮಾದ ಅಸಲಿಯತ್ತು ಏನು ಅನ್ನೋದು ಗೊತ್ತಾಗುತ್ತೆ. ಸದ್ಯ ಟ್ರೈಲರ್, ಹಾಡುಗಳು ಪ್ರೇಕ್ಷಕರಿಗೆ ಕಿಕ್ ಕೊಟ್ಟಿವೆ. ಅದರಲ್ಲೂ ಧ್ರುವ ಸರ್ಜಾ ಹಾಗೂ ರೀಷ್ಮಾ ನಾಣಯ್ಯ ಇಬ್ಬರ ಕೆಮಿಸ್ಟ್ರಿ ಇಂಟ್ರೆಸ್ಟಿಂಗ್ ಎನಿಸುತ್ತಿದೆ.

ಜೋಗಿ ಪ್ರೇಮ್ ರೀಷ್ಮಾ ನಾಣಯ್ಯ ಪಾತ್ರಕ್ಕೆ ಮಚ್ಚು ಲಕ್ಷ್ಮಿ ಅನ್ನೋ ಹೆಸರು ಹುಟ್ಟಿದ್ದೇಗೆ? ಅನ್ನೋದು ರಿವೀಲ್ ಮಾಡಿದ್ದಾರೆ. ಪ್ರೇಮ್‌ಗೆ ಬಹಳ ವರ್ಷಗಳಿಂದ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು. ತಮ್ಮ ಕುಟುಂಬದಲ್ಲಿ ಒಬ್ಬರಂತೆ ಇದ್ದ ಆ ವ್ಯಕ್ತಿ ಇತ್ತೀಚೆಗೆ ತೀರಿಕೊಂಡಿದ್ದಾರು. ಅವರಿಗೆ ಒಬ್ಬ ಗರ್ಲ್‌ಫ್ರೆಂಡ್ ಇದ್ದರು. ಯಾವಾಗಲೂ ಪ್ರೇಮ್ ಬಳಿಕ ತನ್ನ ಗೆಳತಿ ಬಗ್ಗೆ ಚರ್ಚೆ ಮಾಡುತ್ತಿದ್ದರು. ಆ ವೇಳೆ ಕುತೂಹಲಕ್ಕೆ ಪ್ರೇಮ್ ಆ ಹುಡುಗಿಯ ಹೆಸರನ್ನು ಕೇಳಿದ್ದರು. ಆಗ ಅವರು ಡ್ರೈವರ್ ಮಚ್ಚು ಲಕ್ಷ್ಮಿ ಎಂದು ಹೇಳಿದ್ದರು. ಅದೇ ಹೆಸರನ್ನು ರೀಷ್ಮಾ ನಾಣಯ್ಯ ಪಾತ್ರಕ್ಕೆ ಇಟ್ಟಿದ್ದಾಗಿ ಹೇಳಿದ್ದಾರೆ.



ರೀಷ್ಮಾ ನಾಣಯ್ಯ ಪಾತ್ರದ ಬಗ್ಗೆ ರಿವೀಲ್ ಮಾಡುವಾಗಲೇ ನಾನೊಬ್ಬ ಕ್ರಿಯೇಟರ್ ಅಲ್ಲ.. ನಾನೊಬ್ಬ ಕಳ್ಳ ಎಂದು ಹೇಳಿದ್ದಾರೆ. ನನ್ನ ಡ್ರೈವರ್ ತೀರಿಕೊಂಡು ಎರಡು ಮೂರು ತಿಂಗಳಾಯ್ತು. ಅವನು ಒಂದು ಹುಡುಗಿಯನ್ನು ಲವ್ ಮಾಡಿದ್ದ. ಅವಳು ಶ್ರೀರಾಮಪುರದಲ್ಲಿ ಇದ್ದಳು. ಯಾಕೋ ಕೆಲಸಕ್ಕೆ ಬರಲಿಲ್ಲ ಅಂತ ಕೇಳಿದರೆ, ನಮ್ಮ ಹುಡುಗಿ ಬರುತ್ತೇನೆ ಅಂತ ಹೇಳಿದ್ದಾಳೆ ಅವಳಿಗೆ ಜೂಡಿದಾರ ಕೊಡಿಸಬೇಕು ಅಂತ ಹೇಳಿದ್ದ. ಆಗ ನಾನು ಯಾರೋ ಅವಳು ಅಂತ ಹೇಳಿದೆ. ಅದೇ ಸರ್ ಮಚ್ಚು ಲಕ್ಷ್ಮಿ ಅಂತ ಹೇಳಿದ. ಅದನ್ನೇ ರೀಷ್ಮಾ ನಾಣಯ್ಯ ಪಾತ್ರಕ್ಕೆ ಇಟ್ಟಿದ್ದೇನೆ. ನಾನು ಕ್ರಿಯೇಟರ್ ಅಲ್ಲ. ನಾನೊಬ್ಬ ಕಳ್ಳ. ನಾನು ಎಲ್ಲ ಹೇಳಿಕೊಳ್ಳುತ್ತೇನೆ. ನನಗೇನು ತೊಂದರೆ ಇಲ್ಲ. ಎಂದು ಪ್ರೇಮ್ ಹೇಳಿಕೊಂಡಿದ್ದಾರೆ.

# ದೇಶದ ಅಭಿವೃದ್ಧಿಗೆ ನಮ್ಮ ಸಂವಿಧಾನ ಪೂರಕ

## ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆ | ಡಾ.ಎನ್.ಆರ್.ಪುರುಷೋತ್ತಮ್‌ಗೆ ಸೇವಾ ರತ್ನ ಪ್ರಶಸ್ತಿ | ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇಶದಲ್ಲಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಮತ್ತು ವೈಜ್ಞಾನಿಕ ಸಮಾನತೆಗೆ ಡಾ. ಬಿ.ಆರ್.ಅಂಬೇಡ್ಕರ್ ರಚಿತ ಸಂವಿಧಾನವು ಅಸ್ತ್ರವಾಗಿದೆ. ಈ ಮೂಲಕ ದೇಶದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಎಸ್‌ಸಿ ಮತ್ತು ಎಸ್‌ಟಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭೀವೃದ್ಧಿ ಸಂಘ ಜಿಲ್ಲಾ ಘಟಕ, ಮತ್ತು ತಾಲ್ಲೂಕು ಘಟಕ ಇವರ ವತಿಯಿಂದ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆ, ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ.ಎನ್.ಆರ್.ಪುರುಷೋತ್ತಮ್ ಅವರಿಗೆ ಜಿಲ್ಲಾ ಡಾ.ಬಿ.ಆರ್. ಅಂಬೇಡ್ಕರ್ ಸೇವಾ ರತ್ನ ಪ್ರಶಸ್ತಿ ಪ್ರದಾನ ಹಾಗೂ ತಾಲ್ಲೂಕು ಎಸ್‌ಸಿ, ಎಸ್‌ಟಿ ಪ್ರಾಥಮಿಕ ಮತ್ತು ಮಾಧ್ಯಮಕ್ಕೆ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷ ಎಚ್.ಎನ್. ಮೂರ್ತಿಯವರ ಪದಗ್ರಹಣ ಸಮಾರಂಭ ಸೇರಿದಂತೆ ಪಿಯುಸಿಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ದೇಶದ ಹೆಮ್ಮೆ, ಅವರಿಗೆ ಅವರೇ ಸರಿಸಾಟಿ, ಭಾರತ ದೇಶವು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ ಮತ್ತು ಆರ್ಥಿಕವಾಗಿ ಶಕ್ತಿಯುತವಾಗಿ ಬೆಳೆಯಲು ಅಂಬೇಡ್ಕರ್ ರಚಿತ ಸಂವಿಧಾನ ಕಾರಣವಾಗಿದೆ. ಸಾಮಾಜಿಕ ನ್ಯಾಯದಡಿ ಸರ್ವರಿಗೂ ಸಮಪಾಲು ಸರ್ವರಿಗೂ ಸಹಬಾಳು ಎಂಬ ಧ್ಯೇಯದೊಂದಿಗೆ ಸಂವಿಧಾನದ ಮೂಲಕ ಆಗಾಧ



ಶಕ್ತಿಯನ್ನ ಪ್ರತಿಯೊಬ್ಬ ನಾಗರಿಕರಿಗೂ ನೀಡಿದ ಕೀರ್ತಿ ಅಂಬೇಡ್ಕರ್‌ರವರಿಗೆ ಸಲ್ಲುತ್ತದೆ, ನಮ್ಮ ಸಂವಿಧಾನದ ಫಲವಾಗಿ ನಮ್ಮ ದೇಶ ಗಟ್ಟಿಯಾಗಿ ನೆಲೆಯೂರಿದೆ. ಸಂವಿಧಾನವು ದೇಶದ ಪ್ರಗತಿಗೆ ಸಂಕೇತವಾಗಿದೆ ಸಂವಿಧಾನವನ್ನ ಪ್ರತಿಯೊಬ್ಬ ವಿದ್ಯಾರ್ಥಿಗಳು ಓದಬೇಕು. ಅದರಲ್ಲಿನ ಆದರ್ಶಗಳನ್ನ ಅಳವಡಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ಪ್ರತಿ ವರ್ಷ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಂವಿಧಾನದ ಕುರಿತಾಗಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ ಎಂದರು.

ಇನ್ನೂ ಪಟ್ಟಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಯ ಅನಾವರಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪನವರು ಮೇ 20ರ ನಂತರ ದಿನಾಂಕ ನಿಗದಿಗೊಳಿಸುವಂತೆ ಸೂಚಿಸಿದ್ದು, ಶೀಘ್ರ ದಿನಾಂಕ ನಿಗದಿಗೊಳಿಸಿ ಲೋಕಾರ್ಪಣೆ ಕಾರ್ಯಕ್ರಮವನ್ನು ಐತಿಹಾಸಿಕ ಕಾರ್ಯಕ್ರಮವಾಗಿ ರೂಪಿಸಲಾಗುವುದು ಎಂದರು.

ಸಮಾರಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೂಲಭೂತ ಸೌಕರ್ಯ ವಿಭಾಗದಲ್ಲಿನ ಜಂಟಿ ನಿರ್ದೇಶಕ ಡಾ.ಎನ್.ಆರ್.ಪುರುಷೋತ್ತಮ್ ಮತ್ತವರ ಕುಟುಂಬವನ್ನು ಜಿಲ್ಲಾ ಮಟ್ಟದ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಜಿಲ್ಲೆಯ ಸಾಕಷ್ಟು ತಾಲ್ಲೂಕುಗಳಲ್ಲಿ ಸನ್ಮಾನಕ್ಕೆ ಆಹ್ವಾನಿಸಿದರೂ ಸಮಯದ ಅಭಾವದಿಂದ ಹೋಗಲಾಗಿರಲಿಲ್ಲ, ಈ ನೆಲದ ಋಣವೇನೋ ಇಂದು ಸನ್ಮಾನವನ್ನು ಸ್ವೀಕರಿಸುವ ಅವಕಾಶ ಬಂದಿದೆ. ಸಮಾಜದ ಅದರಲ್ಲೂ ಶಿಕ್ಷಕರಿಂದ ಸನ್ಮಾನ ಸ್ವೀಕರಿಸುತ್ತಿರುವುದು ಅತೀವ ಸಂತಸವನ್ನು ತಂದಿದೆ. ಶಿಕ್ಷಕರನ್ನ ಅತ್ಯಂತ ಗೌರವಭಾವದಿಂದ ನೋಡುವ ವ್ಯಕ್ತಿ, ಶಿಕ್ಷಣ ಸಮುದಾಯ ಸಮಾಜದ ಬೆನ್ನೆಲುಬು ಎಂದು ಭಾವಿಸುವ ನಾನು ಆ ಬಳಗದಿಂದ ಸನ್ಮಾನ ದೊರೆಯುತ್ತಿರುವುದು ಖುಷಿ ತಂದಿದೆ ಎಂದು ಹೇಳಿದರು.

ಎಸ್ಸಿ, ಎಸ್ಟಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷರಾಗಿ ಪದಗ್ರಹಣ ಸ್ವೀಕರಿಸಿದ ಎಚ್.ಎನ್.ಮೂರ್ತಿ ಮತ್ತು ನಿಕಟಪೂರ್ವ ಅಧ್ಯಕ್ಷ ಟಿ.ಬಂಜಪ್ಪ ಅವರನ್ನು ಅಭಿನಂದಿಸಲಾಯಿತು. ಜಿಲ್ಲಾಧ್ಯಕ್ಷ ರಾಜೇಂದ್ರ ದೊಡ್ಡಮಗ್ಗೆ ಪ್ರಾಸ್ತವಿಕವಾಗಿ ಮಾತನಾಡಿದರು.

ಸಮಾಜಸೇವಕ ಕೆ.ಆರ್.ಲಕ್ಷ್ಮಿಕಾಂತ್, ಜಿಲ್ಲಾ ಸಂಘ, ತಾಲ್ಲೂಕು ಸಂಘದ ಪದಾಧಿಕಾರಿಗಳಾದ ಟಿ.ಮಂಜಪ್ಪ, ಸೋಮನಾಯಕ್, ಈರಯ್ಯ, ಧರ್ಮಪ್ಪ ನಾಯಕ್, ಶಾಂತಮ್ಮ, ಬಿ.ಎಸ್.ರಾಜು, ವೀರೇಶ್ ಕೆಪಿ, ಸಿ.ಡಿ.ಭಾರತಿ, ಲೋಕೇಶ್‌ಕುಮಾರ್, ನಾಗರಾಜ್ , ಹೆಚ್.ಡಿ. ಸೋಮೇಶ್, ಚಂದ್ರಕುಮಾರ್, ಮಂಜಪ್ಪ ಸೇರಿ ಇನ್ನಿತರರು ಹಾಜರಿದ್ದರು.

# ಭಕ್ತಿಪೂರ್ವಕ ನರಸಿಂಹ ಜಯಂತಿ

• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ, ಶ್ರೀ ಚನ್ನಕೇಶವಸ್ವಾಮಿ, ಶ್ರೀ ವೇಣು ಗೋಪಾಲಸ್ವಾಮಿ ತ್ರಿಕೂಟಾಚಲ ದೇವಾಲಯದಲ್ಲಿ ನರಸಿಂಹ ಜಯಂತಿ ಪ್ರಯುಕ್ತ ಗುರುವಾರ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ಸನ್ನಿಧಿಯಲ್ಲಿ ಬೆಳಿಗ್ಗೆ ಸುಪ್ರಭಾತ ಸೇವೆ ನಡೆದ ನಂತರ ಪಂಚಾಮೃತ ಅಭಿಷೇಕ, ಮಂಗಳ ದ್ರವ್ಯ ಅಭಿಷೇಕ, ಮನ್ಯೂಸೂಕ್ತ ಅಭಿಷೇಕ, ಪುಷ್ಪಾಲಂಕಾರ, ಸಹಸ್ರ ನಾಮ ಸೇವೆ, ತುಳಸಿ ಅರ್ಚನೆ ನಂತರ ಮಹಾಮಂಗಳಾರತಿ ಕಾರ್ಯಕ್ರಮ ನಡೆಯಿತು.

ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿಯವರ ಪ್ರಕಾರ ಉತ್ಸವ ತೀರ್ಥ ಪ್ರಸಾದ ಸೇವೆ ನಡೆಯಿತು. ಈ ಕಾರ್ಯಕ್ರಮಕ್ಕೆ ಭಕ್ತಾಧಿಗಳು ಭಾಗವಹಿಸಿ ನರಸಿಂಹ ದೇವರ ದರ್ಶನ ಪಡೆದರು. ಇಸ್ಕಾನ್ ಭಕ್ತರುಗಳಿಂದ ಹೂವಿನ ಸೇವೆ. ಜ್ಯೋತಿ ಮಂಜುನಾಥ್ ಕುಟುಂಬದವರಿಂದ ಪ್ರಸಾದ ಸೇವೆ ನಡೆಯಿತು. ಹಾರನಹಳ್ಳಿ ಶ್ರೀ ರಾಮಸೇವಾಸಮಿತಿ



ಅಧ್ಯಕ್ಷ ಡಿ.ವಿ.ಪುಟ್ಟಣ್ಣ, ಮುರುಳಿ ಮೋಹನ್ ನಾಗರಾಜ್ ಹಾಗೂ ಗ್ರಾಮಸ್ಥರು ನರಸಿಂಹ ಸ್ವಾಮಿ ಮನೆದೇವರ ಭಕ್ತರುಗಳು ಆಗಮಿಸಿದರು.

**ನಾರಯಣೀಂಪಾರಾಯಣ**

ಜ್ಯೋತಿ ಮತ್ತು ತಂಡ ಹಾಗೂ ಬೆಂಗಳೂರಿನ ವಿದ್ಯಾ, ನಾಗಲಕ್ಷ್ಮೀ. ಸತ್ಯಲಕ್ಷ್ಮೀ, ಸುಪ್ರೀಯ, ಸುಲೋಚನಾ, ಸರೋಜಾ, ಪುಷ್ಪ, ಲಕ್ಷ್ಮೀ, ಸುಜಾತ, ಲತಾ ಹಾಗೂ ನಾಗಲಕ್ಷ್ಮೀ ಅವರು ನಾರಾಯಣಿ ಸ್ತೋತ್ರ ಪಾರಾಯಣ ಮಾಡಿದರು.

# ನಾಳೆ 'ರಾಜಕೀಯ ನೋಟ ಹಾಗು ಪತ್ರಿಕಾ ರಂಗ'

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿಯ ವತಿಯಿಂದ ಮೇ 2 ರಂದು ಏರ್ಪಡಿಸಲಾಗಿರುವ ಸ್ಟಡಿ ವಿತ್ ಸೊಸೈಟಿ ಎಂಬ ಕಾರ್ಯಕ್ರಮ ನಡೆಯಲಿದ್ದು, ಹಿರಿಯ ರಾಜಕಾರಣಿ ವೈಎಸ್‌ವಿ ದತ್ತ ಅವರು ಪಾಲ್ಗೊಳ್ಳಲಿದ್ದಾರೆ.

ಪ್ರತಿ ತಿಂಗಳ ಮೊದಲ ಶನಿವಾರ ನಡೆಯುತ್ತಾ ಬಂದಿರುವ ಸ್ಟಡಿ ವಿತ್ ಸೊಸೈಟಿ ಕಾರ್ಯಕ್ರಮವು ಪತ್ರಕರ್ತರ ಹಾಗು ಪತ್ರಿಕೋದ್ಯಮ ವಿಭಾಗದ ವಿಧ್ಯಾರ್ಥಿಗಳಿಗೆ ಕಲಿಕೆಯ ಒಂದು ವೇದಿಕೆಯಾಗಿದ್ದು ಪ್ರತಿ ತಿಂಗಳು ಸೂಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಜ್ಞಾನ ಸಂಪಾದನೆ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ.

ವೈಎಸ್‌ವಿ ದತ್ತ ಅವರು ಕಳೆದ




ನಾಲ್ಕು ಐದು ದಶಕಗಳಿಂದಲೂ ರಾಜಕಾರಣದಲ್ಲಿ ಸಕ್ರಿಯರಾಗಿದ್ದು ರಾಜ್ಯದ ಎಲ್ಲಾ ಪತ್ರಿಕೆಗಳ ಜೊತೆಗೆ ರಚನಾತ್ಮಕ ಸಂಬಂಧ ಹೊಂದಿದ್ದಾರೆ. ಸರಳತೆ ಹಾಗು ಸೈದ್ಧಾಂತಿಕ ಬದ್ದತೆಗೆ ಹೆಸರಾಗಿರುವ ವೈ ಎಸ್ ವಿ ದತ್ತ ಅವರು ಶನಿವಾರ ಕಾರ್ಯಕ್ರಮದಲ್ಲಿ ರಾಜಕೀಯ ನೋಟ ಹಾಗು ಪತ್ರಿಕಾ ರಂಗ ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಲಿದ್ದಾರೆ. ಉಪನ್ಯಾಸದ ನಂತರ ಪತ್ರಕರ್ತರು ಹಾಗು ಪತ್ರಿಕೋದ್ಯಮ ವಿಧ್ಯಾರ್ಥಿಗಳ ಜೊತೆಗೆ ಸಂವಾದ ನಡೆಸಲಿದ್ದಾರೆ.

ಅಧ್ಯಕ್ಷತೆಯನ್ನು ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಜೆ.ಆರ್.ಕೆಂಚೇಗೌಡ ಅವರು ವಹಿಸಲಿದ್ದು, ಉಪಾದ್ಯಕ್ಷ ನಂಜುಂಡೇಗೌಡ ಹಾಗು ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ ಪಿ ಎಸ್ ಪ್ರಮೋದ್, ಮಾಜಿ ನಗರಸಭಾ ಸದಸ್ಯ ವಾಸುದೇವ್‌ಅವರು ಉಪಸ್ಥಿತರಿರಲಿದ್ದಾರೆ. ಪತ್ರಕರ್ತರು ಹಾಗು ಸಾಂಸ್ಕೃತಿಕ ಸಮಿತಿಯ ಸಂಚಾಲಕ ಮಲ್ಲಿಕಾರ್ಜುನ ಕೊಚ್ಚರಗಿ ಅವರು ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಬಾಗವಹಿಸುವ ಪತ್ರಿಕೋದ್ಯಮ ವಿಧ್ಯಾರ್ಥಿಗಳಿಗೆ ತರಬೇತಿ ಪತ್ರವನ್ನು ನೀಡಲಿದ್ದು ಅವರ ಭವಿಷ್ಯದ ಹಾದಿಗೆ ನೆರವಾಗುವ ಉದ್ದೇಶವನ್ನು ಹೊಂದಲಾಗಿದೆ.

ಜಿಲ್ಲೆಯ ಪತ್ರಕರ್ತರು ಹಾಗೂ ಪತ್ರಿಕಾ ವಲಯದ ಕಲಿಕಾರ್ಥಿಗಳು ಭಾಗವಹಿಸುವಂತೆ ಕೋರಲಾಗಿದೆ.

# ಪ್ರತಿಯೊಬ್ಬರೂ ಪರಿಸರದ ಬಗ್ಗೆ ಜಾಗೃತಿ ಹೊಂದಬೇಕು

## ಹೆಬ್ಬಾಳು ಗ್ರಾಮದಲ್ಲಿ ಆರೋಗ್ಯ ಅರಿವು ಕಾರ್ಯಕ್ರಮ

• ಪ್ರಜೋದಯ ವರದಿ

**ಹಳೇಬೀಡು:** ರೆಡ್ ಕ್ರಾಸ್ ಸಂಸ್ಥೆಯ ಕೆಲಸ ಕಾರ್ಯಗಳು ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ರೋಟರಿ ಸಂಸ್ಥೆಯು ಮಾಡುತ್ತಿರುವ ಕೆಲಸ ಕಾರ್ಯಗಳು ಶ್ಲಾಘನೀಯ ಎಂದು ರೆಡ್‌ಕ್ರಾಸ್ ಸಭಾಪತಿ ವೈ.ಎಸ್.ಸಿದ್ದೇಗೌಡ ಅವರು ತಿಳಿಸಿದರು.

ವಿಶ್ವ ಮಲೇರಿಯಾ ದಿನದ ಪ್ರಯುಕ್ತ ಹೆಬ್ಬಾಳು ಗ್ರಾಮದಲ್ಲಿ ಆಯೋಜಿಸಿದ್ದ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರ ಆರೋಗ್ಯ ರಕ್ಷಣೆ ಅಮೂಲ್ಯವಾದದ್ದು. ಕುಡಿಯುವ ನೀರು, ಪರಿಸರದ ಜಾಗೃತಿ ಮೂಡಿಸಿಕೊಳ್ಳಬೇಕೆಂದು ಹೇಳಿದರು.

ರೋಟರಿ ಸಂಸ್ಥೆ ಕಾರ್ಯದರ್ಶಿ ರಮೇಶ್ ಅವರು ಮಾಸ್ಕ್ ಪೆಟ್ಟಿಗೆಯನ್ನು ತೆರೆದು ಸಾಂಕೇತಿಕವಾಗಿ ಸಾರ್ವಜನಿಕರಿಗೆ ಮಾಸ್ಕ್ ನೀಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಮಾಹಿತಿ ತಿಳಿಸಿದರಲ್ಲದೆ, ನಮ್ಮ ಸಂಸ್ಥೆ ಪಲ್ಸ್ ಪೋಲಿಯೋ ಕಾಯಿಲೆಗೆ ನೀಡುತ್ತಿರುವ ಕೊಡುಗೆ ಅಪಾರವಾದದ್ದು ಎಂದು ತಿಳಿಸಿದರು.




ಐ.ಸಿ.ಟಿ.ಸಿ .ವಿಭಾಗದ ಧರಣೇಶ್ ಅವರು ಏಡ್ಸ್ ರೋಗದ ಕುರಿತು ಮಾತನಾಡಿದರು. ಎನ್.ಸಿ.ಡಿ. ವಿಭಾಗದಿಂದ ಬಿ.ಪಿ., ಶುಗರ್‌ಗಳನ್ನು ಪ್ರತಿಯೊಬ್ಬರು ನಿಯಮಿತವಾಗಿ ಪರೀಕ್ಷಿಸಿಕೊಳ್ಳಬೇಕು ಎಂದು ಹಾಲೇಶ್ ತಿಳಿಸಿದರು. ನಂತರ ಪ್ರತಿಯೊಬ್ಬರನ್ನು ಪರೀಕ್ಷಿಸಿದರು. ಮಲೇರಿಯ ರೋಗ ಹೇಗೆ ಹರಡುತ್ತದೆ ಎಂಬುದರ ಬಗ್ಗೆ ಅದರಲ್ಲೂ ಹೆಣ್ಣು ಸೊಳ್ಳೆ, ಗಂಡು ಸೊಳ್ಳೆಯ ಪಾತ್ರ. ನಿವಾರಣೋಪಾಯದ ಕುರಿತು ಸಾರ್ವಜನಿಕ ಆಸ್ಪತ್ರೆಯ ಮಲೇರಿಯಾ ರೋಗ ವಿಭಾಗದ ಸಂಯೋಜಕರು ಮಾತನಾಡಿದರು.

ವೈದ್ಯಾಧಿಕಾರಿ ಡಾ. ಅನುಪಮಾ ಶೆಟ್ಟಿ ಮಾತನಾಡುತ್ತಾ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸುವ ಅದರಲ್ಲೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ. ಆಯೋಜಿಸುವ ಆರೋಗ್ಯದ ಅರಿವು ಕಾರ್ಯಕ್ರಮಗಳಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು. ಅದರ ಸೌಲಭ್ಯವನ್ನು ಪಡೆದುಕೊಳ್ಳಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಮನೆಬಾಗಿಲಿಗೆ ಆರೋಗ್ಯದ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಂಡರೂ ಗ್ರಾಮೀಣ ಭಾಗದ ಜನರು ಸದುಪಯೋಗ ಪಡಿಸಿಕೊಳ್ಳುವಲ್ಲಿ ಹಿಂದೇಟು ಹಾಕುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮುತಗನ್ನೆ ರಾಜಕುಮಾರ್ ಶಿಕ್ಷಣ ಇಲಾಖೆಯಲ್ಲಿ ಸಲ್ಲಿಸಿದ ಸೇವೆ ಮತ್ತು ವಿವಿಧ ಸಂಘ-ಸಂಸ್ಥೆಗಳಲ್ಲಿ ಅವರು ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ಜೊತೆಗೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸದಸ್ಯರಾಗಿದ್ದು, ವಿವಿಧ ಆರೋಗ್ಯದ ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಗುರುತಿಸಿ ಗೌರವಿಸಿ, ಸನ್ಮಾನಿಸಿ ಅಭಿನಂದಿಸಲಾಯಿತು.

# ಹಾಸನದಲ್ಲಿ ಕಲಾ ಗ್ಯಾಲರಿ ನಿರ್ಮಾಣವಾಗಲಿ

## ಬಿ.ಎಸ್.ದೇಸಾಯಿ | ಕದಂಬ ಸೇನೆ ಕನ್ನಡ ಸಂಘಟನೆಯಿಂದ ಕಲಾಸಾಧಕರಿಗೆ ಗೌರವ ಸನ್ಮಾನ

• ಪ್ರಜೋದಯ ವರದಿ

ಹಾಸನ: ಚಿತ್ರಕಲಾ ಜಗತ್ತಿನಲ್ಲಿ ಕಳೆದ ಮೂವತ್ತಾರು ವರ್ಷಗಳಿಂದ ತಾವು ಸೇವೆ ಸಲ್ಲಿಸುತ್ತಿದ್ದು, ಈ ಸೇವೆಯು ನಮಗೆ ತೃಪ್ತಿ ನೀಡಿದೆ. ಪ್ರಕೃತಿಯ, ಸಮಾಜದ ಮತ್ತು ಯೋಗದ ಮಹತ್ವದ ಕುರಿತು ಅಂತರಂಗ ಮತ್ತು ಬಹಿರಂಗಗಳನ್ನು ಬಿಂಬಿಸುವ ಅಮೂರ್ತ ಪರಿಕಲ್ಪನೆಯನ್ನು ಮೂರ್ತ ಸ್ವರೂಪದ ಸಂದೇಶಗಳಾಗಿ ಜಗತ್ತಿಗೆ ನೀಡಬೇಕಿದೆ. ಹಾಸನ ಜಿಲ್ಲಾ ಕೇಂದ್ರದಲ್ಲಿ ಒಂದು ಸುಂದರವಾದ ಆರ್ಟ್ ಗ್ಯಾಲರಿ ಪ್ರಾರಂಭವಾಗಬೇಕು. ಜಗತ್ತಿನ ಶ್ರೇಷ್ಠ ಚಿತ್ರಗಳು ಅಲ್ಲಿ ಪ್ರದರ್ಶಿತವಾಗಬೇಕು. ಅಲ್ಲದೇ ಸ್ಥಳೀಯ ಚಿತ್ರಕಲಾವಿದರ



ಮತ್ತು ಚಿತ್ರಕಲಾ ಶಿಕ್ಷಕರಿಗೆ ಪ್ರೋತ್ಸಾಹ ಸಿಗುವಂತೆ ಆಗಬೇಕೆಂದು ಚಿತ್ರಕಲಾ ಶಿಕ್ಷಕ ಬಿ.ಎಸ್.ದೇಸಾಯಿ ಆಶಿಸಿದರು.

ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿ ವತಿಯಿಂದ ಕೊಡಮಾಡುವ 2025-26 ನೇ ಸಾಲಿನ ಗೌರವ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಲೇಖಕರ ಗೊರೂರು ಅನಂತ ರಾಜು ಅವರು ಮಾತನಾಡಿ, ಸಂಘಟನೆಯು ಸಾಧಕರನ್ನು ಪ್ರೋತ್ಸಾಹಿಸಿ ಗೌರವಿಸುವ ಮೂಲಕ ವಿಶಿಷ್ಟವಾದ ಕಾರ್ಯವನ್ನು ಮಾಡಿದೆ. ಬಿ. ಎಸ್. ದೇಸಾಯಿಯವರು ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ್ದಾರೆ. ಇದನ್ನು ಪರಿಗಣಿಸಿ ಅವರಿಗೆ ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿಯ ಗೌರವ ಪ್ರಶಸ್ತಿ ಸಂದಿರುವುದು ನಮ್ಮೆಲ್ಲರಿಗೂ ಸಂತಸ ತಂದಿದೆ ಎಂದರು.

ಕದಂಬ ಸೈನ್ಯ ಕನ್ನಡ ಸಂಘಟನೆಯ ಹಾಸನ ಜಿಲ್ಲಾಧ್ಯಕ್ಷ ಎ. ಹೆಚ್. ಗಣೇಶ್ ಅಂಕಪುರ ಅವರು ಮಾತನಾಡಿ, ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಆಯ್ದುಕೊಳ್ಳುತ್ತದೆ. ಎಂದರು.

ಶಿಕ್ಷಕ ಕೆ.ಎನ್.ಚಿದಾನಂದ, ಉದ್ಯಮಿ ವಿಶ್ವಾಸ್ ಡಿ.ಗೌಡ, ಕುಮಾರ್, ಜೆ.ಆರ್.ಶ್ರೀಕಾಂತ್ ಹಾಜರಿದ್ದರು.

# ಯಾವುದೇ ಕೆಲಸವನ್ನಾದರೂ ನಿಷ್ಠೆಯಿಂದ ಮಾಡಬೇಕು

• ಪ್ರಜೋದಯ ವರದಿ

**ಹಾಸನ:** ನಾವು ಮಾಡುವ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಾ ಹೋಗೋಣ. ಕೇಳುವ ಹೃದಯಗಳಲ್ಲಿ ಯಾವುದಾದರೂ ಒಂದೆರಡು ಹೃದಯಗಳು ಸಾಹಿತ್ಯದ ಎಡೆಗೆ ಹಾತೊರೆಯಬಹುದು. ಸಾಹಿತ್ಯವನ್ನು ಮುನ್ನಡೆಸಬಹುದು. ಹಾಗೆಯೇ ಬೆಳೆಸಬಹುದು ಎಂದು ಕವಿ ಬಿ.ಆರ್.ಲಕ್ಷ್ಮಣ್ ರಾವ್ ಅವರು ಹೇಳಿದರು.

ನಗರದ ರಿಂಗ್ ರಸ್ತೆಯಲ್ಲಿರುವ ಅಕ್ಷರ ಅಕಾಡೆಮಿಯಲ್ಲಿ ಮಂಗಳವಾರ ನಡೆದ ಬುಕ್-ಮಾತು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಮ್ಮ ಸಾಹಿತ್ಯ ಸುಬ್ಬ ಭಟ್ಟರ ಮಗಳೇ..... ಎಂಬ ಹಾಡನ್ನು ತಮ್ಮ ಕಂಡಸಿರಿಯಲ್ಲಿ ಹಾಡಿ ನೆರೆದಿದ್ದಂತಹ ಎಲ್ಲ ಸಭಿಕರ ಮನಸ್ಸನ್ನು ಅತ್ಯಂತ ಸರಳವಾಗಿ ತಿಳಿಸಿದರು.



ಚಲನಚಿತ್ರ ನಿರ್ದೇಶಕ ಲಿಂಗದೇವರು ಮಾತನಾಡಿ, ಹೆತ್ತವರ ಹೊಣೆಗಾರಿಕೆ ನಮ್ಮೆಲ್ಲರ ಕರ್ತವ್ಯ. ಎಂದು ಹೇಳಿ ಸಭಿಕರ ಪ್ರಶ್ನೆಗಳಿಗೆ ಸಂವಾದದಲ್ಲಿ ಉತ್ತರಿಸಿದ ಅವರು, ಅವರ ಮೌನಿ, ನಾನು ಅವನಲ್ಲ ಅವಳು ಚಲನಚಿತ್ರಗಳ ಅವರ ಅನುಭವಗಳನ್ನ ಅತ್ಯಂತ ಸುಂದರವಾಗಿ ಎಲ್ಲರೊಂದಿಗೆ ಹಂಚಿಕೊಂಡರು. ಇಂದು ಕೇವಲ ಆದಾಯದ ದೃಷ್ಟಿಕೋನದಲ್ಲಿ ಬೆಳೆಯುತ್ತಿರುವ ಚಲನಚಿತ್ರ ಕ್ಷೇತ್ರದಲ್ಲಿ ಇಂತಹ ವ್ಯಕ್ತಿಗಳ ಸಾಮಾಜಿಕ ಕಳಕಳಿಯುಳ್ಳ ಇಂತಹ ಪ್ರಯೋಗಶೀಲ ಚಿತ್ರಗಳು ಸಿನಿ ರಸಿಕರನ್ನು ಮಂತ್ರ ಮುಗ್ಧರನ್ನಾಗಿಸುವುದರೊಂದಿಗೆ ನಿರ್ದೇಶಕರಿಗೂ ಸಹ ರಾಷ್ಟ್ರಮಟ್ಟದ ಪ್ರಶಸ್ತಿಯನ್ನ ತಂದು ಕೊಟ್ಟಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ ಎಂದರು.

ಅಕ್ಷರ ಅಕಾಡೆಮಿ ಹಾಗೂ ಟೈಮ್ಸ್ ಸಮೂಹ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಕೆ.ಗಂಗಾಧರ್ ಮಾತನಾಡಿ, ಯುವ ಪೀಳಿಗೆಯಲ್ಲಿ ಸಾಹಿತ್ಯದ ಬೆಳವಣಿಗೆ ಅಥವಾ ಸಾಹಿತ್ಯದ ಅಭಿವೃದ್ಧಿ ಹೇಗಾಗಬಹುದೆಂಬ ದೂರ ದೃಷ್ಟಿಕೋನದ ಪ್ರಶ್ನೆಯನ್ನು ಆಹ್ವಾನಿತರಲ್ಲಿ ಮುಂದಿಟ್ಟು ತಮಗಿರುವ ಸಾಹಿತ್ಯದ ಆಸಕ್ತಿಯೊಂದಿಗೆ ಇಂದಿನ ಗೂಗಲ್ ವಿಷಯವನ್ನ ಹೇಳಬಹುದೇ ಹೊರತು ಜ್ಞಾನವನ್ನು ನೀಡುವುದಿಲ್ಲ. ಪುಸ್ತಕ ಗಳು ಜ್ಞಾನ ಸಂಪಾದನೆಯಲ್ಲಿ ಅತ್ಯಂತ ಉತ್ತುಂಗಕ್ಕೆ ಕೊಂಡೊಯ್ಯಲು ಸಹಕಾರಿಯಾಗಿವೆ. ಎಂದರು.

ಅಕ್ಷರ ಅಕಾಡೆಮಿ ಸಂಚಾಲಕ ಕಾರ್ತಿಕ್ ಇತರರು ಹಾಜರಿದ್ದರು.

# ಕ್ರೀಡಾ ಚಟುವಟಿಕೆಗಳಿಂದ ದೇಹಕ್ಕೆ ಉತ್ತಮ ಆರೋಗ್ಯ ಲಭ್ಯ

• ಪ್ರಜೋದಯ ವರದಿ

**ಹಾಸನ:** ಕ್ರೀಡಾಪಟುಗಳಿಗೆ ಶಿಸ್ತು ಸಹನೆ ಮತ್ತು ಸಂಯಮ ಇರಬೇಕಾಗುತ್ತದೆ. ನಮ್ಮ ದೇಹಕ್ಕೆ ಉತ್ತಮ ಆರೋಗ್ಯವನ್ನು ಕ್ರೀಡಾ ಚಟುವಟಿಕೆಗಳು ನೀಡುತ್ತವೆ ಎಂದು ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಅಮರೇಂದ್ರ ಅವರು ತಿಳಿಸಿದರು.

ಗುರುವಾರ ಮಲೆನಾಡು ಆಟದ ಮೈದಾನದಲ್ಲಿ ನಡೆದ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯು ಕನಿಷ್ಠ ಒಂದು ಕ್ರೀಡಾಕೂಟದಲ್ಲಾದರೂ ಭಾಗವಹಿಸಬೇಕು. ಕ್ರೀಡಾಕೂಟಗಳಲ್ಲಿ ಸೋಲು, ಗೆಲುವು ಮುಖ್ಯವಲ್ಲ ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಇಂತಹ ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಬೇಕೆಂದರು.

ಇತ್ತೀಚೆಗೆ ಕ್ರಿಕೆಟ್, ಫುಟ್ಬಾಲ್, ಹಾಕಿ, ಕಬ್ಬಡಿ, ಕೊಕ್ಕೋ, ಆಟಗಳು ಜನಪ್ರಿಯ ಕ್ರೀಡೆಗಳಾಗಿವೆ. ನಾವುಗಳು ಕ್ರಿಯಾಶೀಲರಾಗಬೇಕಾದರೆ ಆರೋಗ್ಯದಿಂದಿರಬೇಕಾದರೆ ಆಟೋಟ ಸ್ಪರ್ಧೆಗಳಲ್ಲಿ, ಕ್ರೀಡಾಕೂಟಗಳಲ್ಲಿ ಭಾಗವಹಿಸುವುದು ಅತಿ ಮುಖ್ಯವಾಗಿದೆ ಎಂದರಲ್ಲದೆ, ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಹಾಗೂ ಕ್ಲಬ್ ವಿದ್ಯಾರ್ಥಿಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದು ಸಂತೋಷಕರವಾಗಿದೆ ಎಂದರು.

ಪ್ರತಿ ವರ್ಷವು ನಮ್ಮ ಕಾಲೇಜಿನಲ್ಲಿ ವಾರ್ಷಿಕ ಕ್ರೀಡಾಕೂಟವನ್ನು ಏರ್ಪಡಿಸಿ ಗೆದ್ದಂತಹ ವಿದ್ಯಾರ್ಥಿಗಳಿಗೆ ಸೂಕ್ತ ಬಹುಮಾನವನ್ನು ಹಾಗೂ ಪದಕಗಳನ್ನು ನೀಡಲಾಗುತ್ತಿದೆ. ನಮ್ಮ ಕಾಲೇಜಿನಲ್ಲಿ ವಿಶಾಲವಾದ ಮೈದಾನವಿದ್ದು ಎಲ್ಲಾ ರೀತಿಯ ಆಟೋಟ ಸ್ಪರ್ಧೆಗಳಿಗೆ ಹಾಗೂ ದಿನನಿತ್ಯ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಕಾಲೇಜು ಕ್ರೀಡಾ ವಿಭಾಗದ ದೈಹಿಕ ನಿರ್ದೇಶಕ ಡಿ.ಸೋಮಶೇಖರ್, ಕಾಲೇಜಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದ್ರ ಬಹದ್ದೂರ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಶಿವಶಂಕರ್, ಬಿ.ಬಿ.ನೀಲಕಂಠಪ್ಪ, ಗೀತಾ ಕಿರಣ್, ಡಾ.ಶರತ್, ತಾಂತ್ರಿಕ ಶಿಕ್ಷಣ ಸಮಿತಿಯ ಮಾಧ್ಯಮ ಸಂಯೋಜಕ ಕಟ್ಟಾಯ ಶಿವಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಕ್ರೀಡಾಕೂಟದಲ್ಲಿ ಕಾಲೇಜಿನ ಸಿವಿಲ್ ವಿಭಾಗ, ಮೆಕಾನಿಕಲ್ ವಿಭಾಗ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ವಿಭಾಗ, ಇನ್ಸ್ಟ್ರುಮೇಶನ್ ಟೆಕ್ನಾಲಜಿ ವಿಭಾಗ, ಸಿ.ಎಸ್.,ಬಿ. ಎಸ್., ವಿಭಾಗ, ಎ.ಐ.ಎಮ್. ಎಲ್., ವಿಭಾಗ, ಇನ್ಫರ್ಮೇಷನ್ ಸೈನ್ಸ್ ವಿಭಾಗ, ಕಂಪ್ಯೂಟರ್ ಸೈನ್ಸ್ ವಿಭಾಗ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಕಮ್ಯೂನಿಕೇಶನ್ ವಿಭಾಗ, ಎಲೆಕ್ಟ್ರಾನಿಕ್ಸ್ ಅಂಡ್ ಎಲೆಕ್ಟ್ರಿಕಲ್ಸ್ ವಿದ್ಯಾರ್ಥಿಗಳು ಹಾಗೂ ಲಿಯೋ ಕ್ಲಬ್, ಲಿಟರರಿ ಕ್ಲಬ್, ರೊಟ್ರಾಕ್ಟ್ ಕ್ಲಬ್ ,ಇಕೋ ಕ್ಲಬ್, ಮಿ ರೈಸ್, ಟೆಕ್ನಿಕಲ್ ಕ್ಲಬ್, ಸೈನ್ಸ್ ಅಸೋಸಿ ಯೇಷನ್, ಡೆವಲಪ್ಸ್ ಟೀಮ್, ಸೋಲ್ ಕಲ್ಚರಲ್ ಟೀಮ್‌ಗಳು ಭಾಗವಹಿಸಿದ್ದವು.

# ಐಸಿಎಸ್‌ಇ 10 ನೇ ತರಗತಿ ಪರೀಕ್ಷೆ: ಶೇ.100 ಫಲಿತಾಂಶ

• ಪ್ರಜೋದಯ ವರದಿ

**ಹಾಸನ:** 2025-26ನೇ ಸಾಲಿನ ಶೈಕ್ಷಣಿಕ ವರ್ಷದ ಐಸಿಎಸ್‌ಇ ಹತ್ತನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ನಗರದ ಎಸ್.ಆರ್.ಎಸ್ ಪ್ರಜ್ಞಾ ವಿದ್ಯಾ ಶಾಲೆಯ ವಿದ್ಯಾರ್ಥಿಗಳು ಶೇ. 100 ಫಲಿತಾಂಶವನ್ನು ಸಾಧಿಸಿದ್ದಾರೆ.

ಶಾಲೆಯ ಹೆಮ್ಮೆಯ ವಿದ್ಯಾರ್ಥಿನಿ ತನ್ವಿಕಾ 98% ಫಲಿತಾಂಶ ಪಡೆದು ಶಾಲಾ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಅಕ್ಷಯ್ ಎಸ್. ಗೌಡ 97.6% ಹಾಗೂ ಶಿಂಸನ ಎಂ 97% ಪಲಿತಾಂಶ ಪಡೆದು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಪರೀಕ್ಷೆಗೆ ಹಾಜರಾಗಿದ್ದ 96 ವಿದ್ಯಾರ್ಥಿಗಳಲ್ಲಿ 78 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಹಾಗೂ 18 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



ಭಾಷಾ ಹಾಗೂ ಕೋರ್ ವಿಷಯಗಳಲ್ಲಿ ಹಲವು ವಿದ್ಯಾರ್ಥಿಗಳು 100ಕ್ಕೆ 100, 99, 98, 97, 96, 95 ಅಂಕಗಳನ್ನು ಗಳಿಸಿ ಶಾಲೆಯ ಶೈಕ್ಷಣಿಕ ಸಾಧನೆಯನ್ನು ಹೆಚ್ಚಿಸಿರುತ್ತಾರೆ.

ಅಮೋಘ ಸಾಧನೆಗೈದ ಈ ವಿದ್ಯಾರ್ಥಿಗಳು ಐ.ಸಿ.ಎಸ್.ಇ ಮುಂದುವರೆದ ಭಾಗವಾದ ಐ.ಎಸ್.ಸಿ - 11ನೇ ತರಗತಿಯನ್ನು ಇದೇ ಶಾಲೆಯಲ್ಲಿ ಮುಂದುವರೆಸಿ 12ನೇ ತರಗತಿಯಲ್ಲಿಯೂ ಹೀಗೆಯೇ ಉತ್ತಮ ಫಲಿತಾಂಶ ಗಳಿಸಿ ಜಿಲ್ಲೆಗೆ ಕೀರ್ತಿ ತರುವಂತೆ ಆಶಿಸಿದ್ದಾರೆ.

ಈ ಅಮೋಘ ಸಾಧನೆಗೆ ಶಾಲಾ ಆಡಳಿತ ಮಂಡಳಿಯ ಸದಸ್ಯರು ಹಾಗೂ ಶಿಕ್ಷಕ ವೃಂದದವರು ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

# ಹೆಚ್ಚುವರಿ ಅಂಕ: ತಾಲ್ಲೂಕಿಗೆ ಟಾಪರ್



• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಜೆ.ವರುಣ್ ದ್ವಿತೀಯ ಪಿಯು ಪರೀಕ್ಷೆಯ ಮರು ಮೌಲ್ಯ ಮಾಪನದಲ್ಲಿ 12 ಅಂಕಗಳನ್ನು ಹೆಚ್ಚುವರಿಯಾಗಿ ಪಡೆದು ವಿಜ್ಞಾನ ವಿಭಾಗದಲ್ಲಿ ತಾಲ್ಲೂಕು ಟಾಪರ್ ಎನಿಸಿದ್ದಾನೆ ಎಂದು ಪ್ರಾಂಶುಪಾಲ ಮಹೇಶ್ ಹೊಡೆನೂರು ಅವರು ತಿಳಿಸಿದರು.

ಕಾಲೇಜಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರೀಕ್ಷಾ ಫಲಿತಾಂಶ ಬಂದಾಗ ವರುಣ್‌ಗೆ 580 ಅಂಕಗಳು ದೊರೆತಿದ್ದವು. ಮರು ಮೌಲ್ಯ ಮಾಪನಕ್ಕೆ ಹಾಕಿದಾಗ ಕನ್ನಡದಲ್ಲಿ 7 ಮತ್ತು ಇಂಗ್ಲೀಷ್ ಭಾಷೆಯಲ್ಲಿ 5 ಅಂಕಗಳು ಹೆಚ್ಚುವರಿಯಾಗಿ ಲಭಿಸಿದ್ದು ಒಟ್ಟು 592 (ಶೇ 99) ಅಂಕಗಳನ್ನು ಪಡೆಯುವ ಮೂಲಕ ತಾಲ್ಲೂಕಿಗೆ ಪ್ರಥಮ, ಜಿಲ್ಲಾ ಮಟ್ಟದಲ್ಲಿ ಐದನೆ ಹಾಗೂ ರಾಜ್ಯ ಮಟ್ಟದಲ್ಲಿ ಏಳನೆ ಸ್ಥಾನಗಳಿಸಿದ್ದಾನೆ ಎಂದರು. ವಾಣಿಜ್ಯ ವಿಭಾಗದಲ್ಲಿ ರಚಿತಾ ಶೇ 98 (588) ಅಂಕಗಳನ್ನು ಗಳಿಸಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕಾಲೇಜು ಶೇ 100 ಫಲಿತಾಂಶ ದಾಖಲಿಸಿದೆ. ಇದಕ್ಕಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಹೆಚ್ಚಿನ ಅಂಕಪಡೆದ ಜೆ.ವರುಣ್ ಮತ್ತು ರಚಿತ ಅವರನ್ನು ಗೌರವಿಸಲಾಯಿತು. ಉಪನ್ಯಾಸಕರು ಮತ್ತು ಪೋಷಕರು ಉಪಸ್ಥಿತರಿದ್ದರು.

## 19.38 ಕೋಟಿ ರೂ. ಅನುದಾನದಲ್ಲಿ ಕಾಮಗಾರಿ ಆರಂಭ | ಶಾಸಕ ಹೆಚ್.ಕೆ.ಸುರೇಶ್ ಚಾಲನೆ

# ಬಿಕ್ಕೋಡು: ವಿದ್ಯುತ್ ಪರಿವರ್ತಕ ಘಟಕ ಸ್ಥಾಪನೆಗೆ ಗುದ್ದಲಿಪೂಜೆ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಬಿಕ್ಕೋಡು ಹೋಬಳಿಯಲ್ಲಿ ದೀರ್ಘಕಾಲದಿಂದ ಮುಂದುವರಿದಿದ್ದ ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿ ಪರಿವರ್ತಕ (ಪವರ್ ಸ್ಟೇಷನ್) ಘಟಕ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಶಾಸಕ ಹೆಚ್.ಕೆ.ಸುರೇಶ್ ಮಾತನಾಡಿ, ಈ ಭಾಗದ ರೈತಾಪಿ ಬಂಧುಗಳಿಗೆ ಶುಭ ಸುದ್ದಿಯನ್ನು ತಿಳಿಸುವ ಮಹತ್ವದ ಪ್ರಕ್ರಿಯೆಗೆ ಇಂದು ಚಾಲನೆ ನೀಡಿದ್ದೇವೆ. ಗ್ರಾಮ, ಪಂಚಾಯಿತಿ ಹಾಗೂ ಸುತ್ತಮುತ್ತಲಿನ ಮುಖಂಡರು ಬಸವಣ್ಣ, ನಟರಾಜ್ ಸೇರಿದಂತೆ ಹಲವರ ಸಹಕಾರದಿಂದ ಈ ಯೋಜನೆ ಸಾಧ್ಯವಾಗಿದೆ. ಎಕ್ಸಿಕ್ಯೂಟಿವ್ ಇಂಜಿನಿಯರ್, ಎಇಇ, ಎಇ ದೀಪಕ್ ಸೇರಿದಂತೆ ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು, ಪಿಡಿಒಗಳು ಮತ್ತು ಮಾಧ್ಯಮ ಮಿತ್ರರ ಸಹಕಾರ ಸ್ಮರಣೀಯ ಎಂದು ಹೇಳಿದರು.

ಸಭೆಯಲ್ಲಿ ರೈತರು ರಸ್ತೆ ಸೇರಿದಂತೆ ಹಲವು ಮೂಲಸೌಕರ್ಯ ಸಮಸ್ಯೆಗಳ ಬಗ್ಗೆ ಪ್ರಶ್ನೆ ಎತ್ತಿದರೂ, ನೀರಾವರಿ ಹಾಗೂ ವಿದ್ಯುತ್‌ವೇ ರೈತರ ಏಳಿಗೆಗೆ ಅತ್ಯವಶ್ಯಕ ಎಂಬುದನ್ನು ಹಿರಿಯರು ಒತ್ತಿ ಹೇಳಿದರು. ಈ ಹಿನ್ನೆಲೆಯಲ್ಲಿ ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಲಾಗಿದ್ದು, ಸಚಿವರ ಸ್ಪಂದನೆಯಿಂದ ಸುಮಾರು 19.38 ಕೋಟಿ ರೂ. ಅನುದಾನದಲ್ಲಿ ಕಾಮಗಾರಿ ಆರಂಭವಾಗುತ್ತಿದೆ ಎಂದು ಶಾಸಕರು ತಿಳಿಸಿದರು.



ಮಲ್ನಾಡು, ಅರೆ ಮಲೆನಾಡು ಮತ್ತು ಬಯಲು ಸೀಮೆಯ ನಡುವೆ ಇರುವ ಈ ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ ಗಂಭೀರವಾಗಿದೆ. ಯಾವುದೇ ವಿಳಂಬವಿಲ್ಲದೆ ಕಾಮಗಾರಿ ಆರಂಭಿಸಿ, ಮುಂದಿನ ಜನವರಿಯೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಕಾರ್ಯಕ್ರಮವನ್ನು ಭವ್ಯವಾಗಿ ಮಾಡುವ ಬದಲು ಕಾಮಗಾರಿ ಶೀಘ್ರ ಆರಂಭವೇ ಮುಖ್ಯ ಎಂದು ಅಭಿಪ್ರಾಯಪಟ್ಟ ಅವರು, ಉದ್ಘಾಟನೆಯ ದಿನವನ್ನು ಭವ್ಯವಾಗಿ ಆಚರಿಸೋಣ. ಆ ದಿನದಿಂದಲೇ ಬೋರ್‌ವೆಲ್‌ಗಳಿಗೆ ನಿರಂತರ ವಿದ್ಯುತ್ ಸಿಗಬೇಕು. ರೈತರಿಗೆ ಅನುಕೂಲವಾಗಬೇಕು ಎಂದರು.

'ಬಸವಣ್ಣನವರ ಕಾಯಕವೇ ಕೈಲಾಸ ತತ್ವ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನದ ಮಾರ್ಗದಲ್ಲಿ ಸೇವೆ ಸಲ್ಲಿಸುವುದೇ ನನ್ನ ಧ್ಯೇಯ. ನಾನುಗಿಂತ ನಾವು ಎಂಬ ಮನೋಭಾವ ಮುಖ್ಯ. ರೈತರು ದೇಶದ ಬೆನ್ನೆಲುಬು ಎಂದ ಅವರು, ಕಾಮಗಾರಿ ಶೀಘ್ರ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಕಲ್ಪಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದರು.

ಈ ಮೊದಲು ಎರಡು ಬಾರಿ ಗುದ್ದಲಿ ಪೂಜೆ ನಡೆದರೂ ಕಾಮಗಾರಿ ಸ್ಥಗಿತಗೊಂಡಿದ್ದನ್ನು ಉಲ್ಲೇಖಿಸಿದ ಅವರು, ಈ ಬಾರಿ ಯಾವುದೇ ಅಡಚಣೆಗಳಿಲ್ಲದೆ ಯಶಸ್ವಿಯಾಗಿ ಪೂರ್ಣಗೊಳ್ಳಬೇಕು ಎಂದು ಆಶಿಸಿದರು.

ಗ್ರಾಮದಲ್ಲಿ ದೀರ್ಘಕಾಲದಿಂದ ವಿದ್ಯುತ್ ಸಮಸ್ಯೆ ಎದುರಿಸುತ್ತಿದ್ದ ಹಿನ್ನೆಲೆ ಪವರ್ ಸ್ಟೇಷನ್ ನಿರ್ಮಾಣಕ್ಕೆ ಚಾಲನೆ ದೊರೆತಿರುವುದಕ್ಕೆ ಗ್ರಾಮಸ್ಥರು ವ್ಯಕ್ತಪಡಿಸಿದರು. ಸುಮಾರು 25-30 ವರ್ಷಗಳಿಂದ ಸ್ಥಿರ ವಿದ್ಯುತ್ ಸರಬರಾಜಿಗಾಗಿ ಹೋರಾಟ ನಡೆದಿದ್ದು, ಎಕ್ಸ್‌ಪ್ರೆಸ್ ಲೈನ್ ಇದ್ದರೂ ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲ ಎಂದು ಹೇಳಿದರು. ಫ್ಲಕ್ಚುಯೇಶನ್ ಹಾಗೂ ಲೈನ್ ಟ್ರಿಪ್ ಸಮಸ್ಯೆಯಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದರು ಎಂದರು.

ಈ ಸಮಸ್ಯೆಯನ್ನು ಶಾಸಕರ ಗಮನಕ್ಕೆ ತರಲಾಗಿದ್ದು, ವಿದ್ಯುತ್ ಮಂತ್ರಿಯ ಸ್ಪಂದನೆಯಿಂದ ಈಗ ಶಾಶ್ವತ ಪರಿಹಾರದತ್ತ ಹೆಜ್ಜೆ ಇಡಲಾಗಿದೆ. ಈ ಕಾರ್ಯದಲ್ಲಿ ಶಾಸಕ ಸುರೇಶ್ ಅವರ ಪಾತ್ರ ಮಹತ್ವದ್ದು ಎಂದು ಅವರು ಪ್ರಶಂಸಿಸಿದರು.

ಇದೇ ಸಂದರ್ಭದಲ್ಲಿ ಬೇಲೂರು ಪ್ರವಾಸೋದ್ಯಮ ಅಭಿವೃದ್ಧಿ, ವಿಷ್ಣುಸಮುದ್ರ ಕೆರೆಯ ಅಗಲೀಕರಣ, ವಾಕಿಂಗ್ ವ್ಯವಸ್ಥೆ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರಲ್ಲದೆ, ಅಭಿವೃದ್ಧಿ ಕಾರ್ಯಗಳಲ್ಲಿ ಎಲ್ಲರೂ ಕೈಜೋಡಿಸಬೇಕು, ಅನಗತ್ಯ ರಾಜಕೀಯಕ್ಕೆ ಅವಕಾಶ ಕೊಡಬಾರದು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಎಇ ದೀಪಕ್, ಎಇಇ ಮಧು, ಕಿರಣ್ ಸೇರಿದಂತೆ ಅಧಿಕಾರಿಗಳು ಹಾಗೂ ಗ್ರಾಮಸ್ಥರಾದ ನಟರಾಜ್, ಧರ್ಮೇಶ್, ಮೋಹನ್, ರಂಗೇಗೌಡ, ಭರತ್, ರಾಕೇಶ್, ಬಸವ ಇನ್ನಿತರರು ಉಪಸ್ಥಿತರಿದ್ದರು.

